ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ — 413
2) ಸದಸ್ಯರ ಹೆಸರು — ಶ್ರೀ ಎನ್. ಅಪ್ಪಾಜಿ ಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3) ಉತ್ತರಿಸಬೇಕಾದ ದಿನಾಂಕ — 15-09-2021
4) ಉತ್ತರಿಸಬೇಕಾದ ಸಚಿವರು — ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಮೀನುಗಾರಿಕೆ ಉತ್ತೇಜಿಸಲು ಇರುವ ಕಾರ್ಯಕ್ರಮಗಳು ಯಾವುವು; (ವಿವರ ನೀಡುವುದು)	ರಾಜ್ಯದಲ್ಲಿ ಮೀನುಗಾರಿಕೆ ಉತ್ತೇಜಿಸಲು ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದ್ದು, ವಿವರವನ್ನು **<u>ಅನುಬಂಧ-1</u>** ರಲ್ಲಿ ನೀಡಲಾಗಿದೆ.
ಆ)	ರಾಜ್ಯದಲ್ಲಿರುವ ಮೀನುಮರಿ ಸಾಕಾಣಿಕೆ ಕೇಂದ್ರಗಳ ಸಂಖ್ಯೆ ಎಷ್ಟು; (ಮಾಹಿತಿ ನೀಡುವುದು)	ರಾಜ್ಯದಲ್ಲಿ ಒಟ್ಟು 106 ಮೀನುಮರಿ ಸಾಕಾಣಿಕೆ ಕೇಂದ್ರಗಳು ಇರುತ್ತವೆ. ವಿವರವನ್ನು **<u>ಅನುಬಂಧ-2</u>** ರಲ್ಲಿ ನೀಡಲಾಗಿದೆ.
ಇ)	ಕಳೆದ ಮೂರು ವರ್ಷಗಳಿಂದ ಎಷ್ಟು ಜಾತಿಯ ಮೀನುಮರಿಗಳನ್ನು ವಿತರಣೆ ಮಾಡಲಾಗಿದೆ; (ವಿವರ ನೀಡುವುದು)	ಕಳೆದ ಮೂರು ವರ್ಷಗಳಿಂದ ಕಟ್ಲ, ರೋಹು, ಮೃಗಾಲ್ ಮತ್ತು ಸಾಮಾನ್ಯಗೆಂಡೆ ಜಾತಿಯ ಮೀನುಮರಿಗಳನ್ನು ವಿತರಣೆ ಮಾಡಲಾಗಿದೆ. ವಿವರ ಕೆಳಕಂಡಂತಿವೆ:- ಅವಧಿ / ವಿತರಣೆ ಮಾಡಿದ ಸ್ಪಾನ್ (ಲಕ್ಷಗಳಲ್ಲಿ) / ವಿತರಣೆ ಮಾಡಿದ ಬಿತ್ತನೆ ಮರಿಗಳು (ಲಕ್ಷಗಳಲ್ಲಿ) 2018-19 / 9622.00 / 904.00 ಲಕ್ಷ 2019-20 / 9166.00 / 901.00 ಲಕ್ಷ 2020-21 / 12100.00 / 1068.00 ಲಕ್ಷ
ಈ)	ಮಂಡ್ಯ ಜಿಲ್ಲೆಯಲ್ಲಿ ಎಷ್ಟು ಸಾಕಾಣಿಕೆ ಮತ್ತು ಮೀನುಮರಿ ವಿತರಣಾ ಕೇಂದ್ರಗಳಿವೆ; (ತಾಲ್ಲೂಕುವಾರು ವಿವರ ನೀಡುವುದು)	ಮಂಡ್ಯ ಜಿಲ್ಲೆಯಲ್ಲಿ 08 ಮೀನುಮರಿ ಸಾಕಾಣಿಕೆ ಮತ್ತು ವಿತರಣಾ ಕೇಂದ್ರಗಳಿವೆ. ತಾಲ್ಲೂಕುವಾರು ವಿವರವನ್ನು **<u>ಅನುಬಂಧ-3</u>** ರಲ್ಲಿ ನೀಡಲಾಗಿದೆ.
ಉ)	ಮಂಡ್ಯ ಜಿಲ್ಲೆಗೆ ಕಳೆದ ಮೂರು ವರ್ಷಗಳಲ್ಲಿ ನಾಗಮಂಗಲ ತಾಲ್ಲೂಕು ವ್ಯಾಪ್ತಿಯಲ್ಲಿ ಎಷ್ಟು ಮೀನು ಮರಿಗಳನ್ನು ನೀಡಲಾಗಿದೆ; (ಸಂಪೂರ್ಣ ವಿವರ ನೀಡುವುದು)	ನಾಗಮಂಗಲ ತಾಲ್ಲೂಕು ವ್ಯಾಪ್ತಿಯಲ್ಲಿ ಈ ಕೆಳಕಂಡಂತೆ ಮೀನುಮರಿಗಳನ್ನು ಕೆರೆಗಳಿಗೆ ದಾಸ್ತಾನು ಮಾಡಲಾಗಿದೆ. 2018-19----16.80 ಲಕ್ಷ 2019-20-----53.90 ಲಕ್ಷ 2020-21-----53.00 ಲಕ್ಷ

ಊ)	ಕಳೆದ 3 ವರ್ಷಗಳಲ್ಲಿ ಮೀನುಗಾರಿಕೆ ಇಲಾಖಾ ವತಿಯಿಂದ ಯಾವ ಯಾವ ಕಾಮಗಾರಿಗಳು ಮಂಜೂರು ಮಾಡಲಾಗಿದೆ; ಯಾವ ಯಾವ ಕಾಮಗಾರಿಗಳಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ; ಪೂರ್ಣಗೊಂಡ ಕಾಮಗಾರಿಗಳಾವುವು; ಪ್ರಗತಿಯಲ್ಲಿರುವ ಕಾಮಗಾರಿಗಳಾವುವು; ಪ್ರಾರಂಭವಾಗದ ಕಾಮಗಾರಿಗಳಾವುವು / (ಕಾಮಗಾರಿಗಳ ವಾರು, ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು)	ಕಳೆದ 3 ವರ್ಷಗಳಲ್ಲಿ ಮೀನುಗಾರಿಕೆ ಇಲಾಖಾ ವತಿಯಿಂದ ಮಂಜೂರು ಮಾಡಲಾದ, ಹಣ ಬಿಡುಗಡೆ ಮಾಡಲಾದ, ಪೂರ್ಣಗೊಂಡ, ಪ್ರಗತಿಯಲ್ಲಿರುವ ಹಾಗೂ ಪ್ರಾರಂಭವಾಗದ ಕಾಮಗಾರಿಗಳವಾರು, ತಾಲ್ಲೂಕುವಾರು ಸಂಪೂರ್ಣ ಮಾಹಿತಿಯನ್ನು **<u>ಅನುಬಂಧ-4</u>** ರಲ್ಲಿ ನೀಡಲಾಗಿದೆ

ಸಂಖ್ಯೆ: ಪಸಂಮೀ ಇ-246 ಮೀಇಯೋ 2021

(ಎಸ್. ಅಂಗಾರ) ...9/2021

ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 413ರ

ಅನುಬಂಧ-01

ಮೀನುಗಾರಿಕೆ ಇಲಾಖೆಯಿಂದ ಕೈಗೊಂಡಿರುವ ಅಭಿವೃದ್ಧಿ ಯೋಜನೆಗಳ ವಿವರ

1.ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ

1. "ಮತ್ಸ್ಯ ಕೃಷಿ ಆಶಾ ಕಿರಣ" ಯೋಜನೆಯಡಿ ಕೆರೆಗಳಲ್ಲಿ ಮೀನು ಉತ್ಪಾದನೆಯನ್ನು ಹೆಚ್ಚಿಸಲು ಹಾಗೂ ಮೀನು ಕೃಷಿಗೆ ಉತ್ತೇಜನ ನೀಡಲು, ಪ್ರತಿ ಹೆಕ್ಟೇರ್‌ಗೆ 4,000 ಬಲಿತ ಮೀನು ಮರಿಗಳನ್ನು ಹಾಗೂ 2 ಟನ್ ಕೃತಕ ಆಹಾರವನ್ನು ಖರೀದಿಸಲು ಘಟಕ ವೆಚ್ಚದ ಶೇ.50 ರಷ್ಟು ಹಾಗೂ ಗರಿಷ್ಠ 27,000 ರೂ.ಗಳನ್ನು ನೀಡಲಾಗುವುದು.
2. "ಒಳನಾಡು ಮೀನು ಕೃಷಿಗೆ ಪ್ರೋತ್ಸಾಹ" ಯೋಜನೆ : ಪ್ರತಿ ಹೆಕ್ಟೇರ್ ಉಪಯುಕ್ತತಾ ಜಲವಿಸ್ತೀರ್ಣಕ್ಕೆ 2000 ಬಲಿತ ಬಿತ್ತನೆ ಮೀನುಮರಿಗಳನ್ನು ಮೀನುಗಾರರ ಸಹಕಾರ ಸಂಘಗಳ ಮುಖಾಂತರ ಉಚಿತವಾಗಿ ಕೆರೆಗಳಿಗೆ ಬಿತ್ತನೆ ಮಾಡಿ ಒಳನಾಡು ಮೀನು ಉತ್ಪಾದನೆಯನ್ನು ಹೆಚ್ಚಿಸಲು "ಒಳನಾಡು ಮೀನು ಕೃಷಿಗೆ ಪ್ರೋತ್ಸಾಹ" ಯೋಜನೆ ಅನುಷ್ಠಾನ ಮಾಡಲಾಗುತ್ತಿದೆ.
3. ಜಲಾಶಯ/ಕೆರೆಗಳ ಅಂಚಿನಲ್ಲಿ ನಿರ್ಮಿಸಿದ ಕೊಳಗಳಲ್ಲಿ ಮೀನುಮರಿಗಳನ್ನು ಪಾಲನೆ ಮಾಡಲು ಒಂದು ಹೆಕ್ಟೇರ್ ಗೆ ಗರಿಷ್ಠ.ರೂ 2.50 ಲಕ್ಷ ಸಹಾಯಧನ ನೀಡಲಾಗುವುದು.
4. ಸರ್ಕಾರ ಸ್ವಾಮ್ಯದ ಉತ್ಪಾದನಾ ಮತ್ತು ಪಾಲನಾ ಕೇಂದ್ರಗಳಿಂದ ಮತ್ತು ನೊಂದಾಯಿತ ಮೀನುಮರಿ ಪಾಲನೆದಾರರಿಂದ ಖರೀದಿಸಿದ ಎಲ್ಲಾ ತಳಿಗಳ ಮೀನುಮರಿ ಬೆಲೆಯ ಶೇ.50 ರಷ್ಟು ಅಂದರೆ ವ್ಯಕ್ತಿಗತ ಗರಿಷ್ಠ ರೂ.5,000/- ಹಾಗೂ ಸಂಘ ಸಂಸ್ಥೆಗಳಿಗೆ ಗರಿಷ್ಠ ರೂ.20,000/- ಕ್ಕೆ ಮಿತಿಗೊಳಪಟ್ಟು ಸಹಾಯಧನವನ್ನು ನೀಡಲಾಗುವುದು. ಮೀನುಗಾರಿಕೆ ಇಲಾಖೆಯಿಂದ ನೋಂದಾಯಿಸಿಕೊಂಡು ಸ್ವಂತ ಕೊಳಗಳಲ್ಲಿ ಮೀನು ಮರಿ ಪಾಲನೆ ಕೈಗೊಳ್ಳಲು ಮೀನು ಕೃಷಿಕರಿಗೆ ಪ್ರತಿ ಹೆಕ್ಟೇರ್ ಜಲವಿಸ್ತೀರ್ಣಕ್ಕೆ 50 ಲಕ್ಷ ಸ್ಪಾನ್ ಅಥವಾ 10 ಲಕ್ಷ ಫ್ರೈ ಖರೀದಿಸಲು ಶೇ.50 ರಷ್ಟು ಗರಿಷ್ಠ ರೂ.25,000 ಗಳ ಸಹಾಯಧನ ಪಡೆಯಲು ಅವಕಾಶ ಕಲ್ಪಿಸಲಾಗಿದೆ.
5. ರಾಜ್ಯದಲ್ಲಿ ಲಭ್ಯವಿರುವ ಒಳನಾಡು ಹಾಗೂ ಹಿನ್ನೀರು ಜಲಸಂಪನ್ಮೂಲಗಳಲ್ಲಿ ಸಿಗಡಿ ಮತ್ತು ಹಿನ್ನೀರು ಮೀನು ಕೃಷಿಯನ್ನು ಪ್ರೋತ್ಸಾಹಿಸಲು ಪ್ರತಿ ಹೆಕ್ಟೇರ್ ವಿಸ್ತೀರ್ಣಕ್ಕೆ 1 ಲಕ್ಷ ರೂ.ಗಳ ಘಟಕ ವೆಚ್ಚಕ್ಕೆ ಶೇ.50 ರಷ್ಟು ಸಹಾಯಧನ ನೀಡಲಾಗುವುದು. ಪ್ರಸಕ್ತ ಸಾಲಿನಲ್ಲಿ 400 ಘಟಕಗಳಿಗೆ ಸಹಾಯಧನ ನೀಡುವ ಉದ್ದೇಶದಿಂದ 2 ಕೋಟಿ ರೂ.ಗಳನ್ನು ನೀಡಲಾಗಿದೆ.

2. ಜಲಾಶಯಗಳಲ್ಲಿ ಮೀನು ಮರಿ ಬಿತ್ತನೆ

ರಾಜ್ಯದ ಆಯ್ದ ಜಲಾಶಯಗಳಲ್ಲಿ ಬೆರಳುದ್ದದ ಮೀನು ಮರಿ ಬಿತ್ತನೆ ಮಾಡುವ ಮೂಲಕ ಮೀನುಗಾರಿಕೆ ಅಭಿವೃದ್ಧಿ ಕೈಗೊಳ್ಳುವುದು. ಅಗತ್ಯವಾದ ಬೆರಳುದ್ದದ ಮೀನುಮರಿಗಳನ್ನು ನೊಂದಾಯಿತ ಮೀನುಮರಿ ಸಾಕಾಣಿಕೆದಾರರಿಂದ ಸರ್ಕಾರವು ನಿಗದಿಪಡಿಸಿದ ದರದಲ್ಲಿ ಖರೀದಿಸಲಾಗುವುದು.

<u>3.ಕೇಂದ್ರ ಪುರಸ್ಕೃತ ನೀಲಿ ಕ್ರಾಂತಿ ಯೋಜನೆಯಡಿಯಲ್ಲಿ (ಪ್ರಧಾನ ಮಂತ್ರಿ ಮತ್ಸ್ಯಸಂಪದ ಯೋಜನೆ)</u>ಮೀನುಗಾರಿಕೆಯ ಸರ್ವತೋಮುಖ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಯೊಜನೆಯಡಿ ಒಳನಾಡು ಮೀನುಗಾರಿಕೆ ಮತ್ತು ಜಲಕೃಷಿ ಅಭಿವೃದ್ಧಿ, ಅಲಂಕಾರಿಕಾ ಮತ್ತು ಮನರಂಜನಾ ಮೀನುಗಾರಿಕೆ ಅಭಿವೃದ್ಧಿ, ನೂತನ ತಂತ್ರಜ್ಞಾನ ಅಳವಡಿಕೆ, ಹಿಡುವಳಿ ನಂತರದ ಶೀತಲ ಸರಪಳಿ ಮೂಲ ಸೌಕರ್ಯ, ಮೀನು ಆಹಾರ ತಯಾರಿಕಾ ಘಟಕ, ಮೀನುಮಾರುಕಟ್ಟೆಗಳು ಮತ್ತು ಮಾರಾಟ ಮೂಲ

ಸೌಕರ್ಯ ಗಳಿಗೆ ಸಹಾಯಧನ ನೀಡಲಾಗುತ್ತಿದೆ. ಸದರಿ ಯೋಜನೆಯಡಿ ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ಘಟಕ ವೆಚ್ಚದ ಶೇಕಡ.40 ರಷ್ಟು ಸಹಾಯಯಧನ ಹಾಗೂ ಮಹಿಳೆಯರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಘಟಕ ವೆಚ್ಚದ ಶೇಕಡ. 60 ರಷ್ಟು ಸಹಾಯಯಧನವನ್ನು ನೀಡಲಾಗುವುದು.

4. ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ

ಅನುಸೂಚಿತ ಜಾತಿ ಮತ್ತು ಪಂಗಡಕ್ಕೆ ಸೇರಿದ ಮೀನುಗಾರರಿಗೆ ಮೀನುಗಾರಿಕೆ ತ್ರಿಚಕ್ರ ವಾಹನ,ಮಿನಿ ಟ್ರಕ್ ,ಸಲಕರಣೆ ಕಿಟ್ ಮತ್ತು ಫೈಬರ್ ಗ್ಲಾಸ್ ಹರಿಗೋಲು ವಿತರಣೆಗೆ ಅವಕಾಶ ಮಾಡಲಾಗಿದೆ.

5. ಉತ್ತರ ಕರ್ನಾಟಕ ಒಳನಾಡು ಮೀನುಗಾರಿಕೆ ಅಭಿವೃದ್ಧಿ ಕೇಂದ್ರ ಸ್ಥಾಪನೆ

ಉತ್ತರ ಕರ್ನಾಟಕದಲ್ಲಿ ಸುಮಾರು 1.64 ಲಕ್ಷ ಹೆಕ್ಟೇರ್ ವಿಸ್ತೀರ್ಣದ ಜಲಾಶಯಗಳು 42,195 ಹೆಕ್ಟೇರ್ ವಿಸ್ತೀರ್ಣದ ದೊಡ್ಡಕೆರೆಗಳು, 20667 ಹೆಕ್ಟೇರ್ ವಿಸ್ತೀರ್ಣದ ಗ್ರಾಮ ಪಂಚಾಯತ್ ಕೆರೆಗಳು, ನದಿಗಳು ಮತ್ತು ಕಾಲುವೆಗಳಿದ್ದು, ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ವಿಪುಲ ಅವಕಾಶವನ್ನು ನೀಡುತ್ತವೆ. ಈ ಹಿನ್ನೆಲೆಯಲ್ಲಿ "ನಿಜ ಶರಣ ಶ್ರೀ.ಅಂಬಿಗರ ಚೌಡಯ್ಯ ಉತ್ತರ ಕರ್ನಾಟಕ ಒಳನಾಡು ಮೀನುಗಾರಿಕೆ ಅಭಿವೃದ್ಧಿ ಸಂಸ್ಥೆ" ಎಂಬ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಉದ್ದೇಶಿತ ಸಂಸ್ಥೆಯ ಮುಖ್ಯ ಉದ್ದೇಶಗಳೆಂದರೆ,

- ಉತ್ತರ ಕರ್ನಾಟಕದ ಸಮಗ್ರ ಮೀನುಗಾರಿಕೆ ಅಭಿವೃದ್ಧಿಗೆ ಸ್ಥಳೀಯ ಅಗತ್ಯತೆಗೆ ಅನುಗುಣವಾಗಿ ಕಾರ್ಯಕ್ರಮಗಳನ್ನು ರೂಪಿಸಿ, ಅನುಷ್ಠಾನಗೊಳಿಸುವುದು.
- ಅಗತ್ಯ ಯೋಜನಾ ವರದಿ ಸಿದ್ಧಪಡಿಸಿ ವಿವಿಧ ಮೂಲಗಳಿಂದ ಮೀನುಗಾರಿಕೆ ಚಟುವಟಿಕೆಗಳಿಗೆ ಅನುದಾನವನ್ನು ಪಡೆದು ಕಾರ್ಯಕ್ರಮ ಅನುಷ್ಠಾನಗೊಳಿಸುವುದು. ಮತ್ತು
- ಮೀನುಗಾರಿಕೆ ಶಿಕ್ಷಣ, ಸಂಶೋಧನೆ, ವಿಸ್ತರಣೆ ಮತ್ತು ಅಭಿವೃದ್ಧಿಯಲ್ಲಿ ನಿರತರಾಗಿರುವ ಸಂಸ್ಥೆಗಳು ಹಾಗೂ ಮೀನುಗಾರರ ಸಂಘಟನೆಗಳ ಸಹಯೋಗದೊಂದಿಗೆ ಉತ್ತರ ಕರ್ನಾಟಕದ ಮೀನುಗಾರಿಕೆ ಮತ್ತು ಮೀನು ಕೃಷಿ ಅಭಿವೃದ್ಧಿಗೆ ಕ್ರಮವಹಿಸುವುದು.

6. ಸಂಕಷ್ಟ ಪರಿಹಾರ ನಿಧಿಗೆ ಅಂಶದಾನಗಳು :

ಸಂಕಷ್ಟ ಪರಿಹಾರ ನಿಧಿಗೆ ಸರ್ಕಾರದಿಂದ ಮೂಲ ಬಂಡವಾಳ ನೀಡುವ ಸಲುವಾಗಿ ಆಯವ್ಯಯದಲ್ಲಿ ಅವಕಾಶ ಕಲ್ಪಿಸಲಾಗಿದೆ. ಈ ನಿಧಿಯಿಂದ ಮೀನುಗಾರಿಕೆಯಲ್ಲಿ ತೊಡಗಿರುವಾಗ ನೈಸರ್ಗಿಕ ವಿಕೋಪಗಳಿಂದ ಮರಣ ಹೊಂದಿದ ಮೀನುಗಾರರ ಆವಲಂಬಿತರಿಗೆ ಹಾಗೂ ಶಾಶ್ವತ ಅಂಗವಿಕಲರಾದ ಮೀನುಗಾರರಿಗೆ ರೂ.3.00 ಲಕ್ಷ ಪರಿಹಾರ ಮತ್ತು ಭಾಗಶಃ ಅಂಗವಿಕಲರಾದವರಿಗೆ ರೂ.1.00 ಲಕ್ಷ ಪರಿಹಾರ ನೀಡಲು ಹಾಗೂ ಬಲೆಹಾನಿ, ದೋಣಿಹಾನಿ ಮತ್ತು ವೈದ್ಯಕೀಯ ವೆಚ್ಚಗಳಿಗೆ ಗರಿಷ್ಠ ರೂ.1.00 ಲಕ್ಷ ಮೀನುಗಾರಿಕೆ ಬಂದರು/ ಇಳಿದಾಣ ಕೇಂದ್ರದಲ್ಲಿ ಕೆಲಸದಲ್ಲಿದ್ದಾಗ ಮರಣ ಹೊಂದಿದಲ್ಲಿ ರೂ.1.00 ಲಕ್ಷ, ಸಮುದ್ರದಲ್ಲಿ ಮೀನುಗಾರಿಕೆಗೆ ಹೋದಾಗ ಅನಾರೋಗ್ಯದಿಂದ ಮರಣ ಹೊಂದಿದಲ್ಲಿ ರೂ.2.00 ಲಕ್ಷ ನೆರವು ನೀಡಲು ಅವಕಾಶವಿದೆ. ಸಮುದ್ರದಲ್ಲಿ ಮೀನುಗಾರಿಕೆ ಮಾಡುವಾಗ ಪ್ರಕೃತಿ ವಿಕೋಪದಿಂದ

ದೋಣಿ ಅವಘಡದಿಂದ ಮೃತರಾದ ಮೀನುಗಾರರ ಕುಟುಂಬದವರಿಗೆ ರೂ 6.00 ಲಕ್ಷ ಪರಿಹಾರ ನೀಡಲಾಗುವುದು.

7. ಸಾಂಪ್ರದಾಯಕ ದೋಣಿಗಳಿಗೆ ಸೀಮೆಎಣ್ಣೆ ಸರಬರಾಜು:

ಸಾಂಪ್ರದಾಯಿಕ ದೋಣಿಗಳಿಗೆ ಪಡಿತರ ದರದಲ್ಲಿ 300 ಲೀಟರ್ ಸೀಮೆ ಎಣ್ಣೆಯನ್ನು ಸರಬರಾಜು ಮಾಡಲು ಅವಕಾಶ ಕಲ್ಪಿಸಲಾಗಿದೆ.

8. ಮೀನುಗಾರಿಕೆ ದೋಣಿಗಳಿಗೆ ಡೀಸಲ್ ಮಾರಾಟ ತೆರಿಗೆ ಮರುಪಾವತಿ

2021-22ನೇ ಸಾಲಿನಿಂದ ಯಾಂತ್ರೀಕೃತ ದೋಣಿಗಳಿಗೆ 1.125 ಲಕ್ಷ ಕಿಲೋಲೀಟರ್ ಡೀಸೆಲ್ ಡೆಲಿವರಿ ಪಾಯಿಂಟ್‌ನಲ್ಲಿಯೇ ಕರರಹಿತ ದರದಲ್ಲಿ ವಿತರಿಸುವುದು ಈ ಯೋಜನೆಯ ಉದ್ದೇಶ.

9. ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆ

1.ಕರಾವಳಿ ಮತ್ತು ಒಳನಾಡಿನಲ್ಲಿ ಸಾಂಪ್ರದಾಯಿಕ ಮೀನುಗಾರರಿಗೆ ಮೀನು ಹಿಡುವಳಿಗೆ ಬೇಕಾದ ಬಲೆ, ಮತ್ತು ಪೂರಕ ಸಾಮಗ್ರಿಗಳನ್ನು ಕಿಟ್ ರೂಪದಲ್ಲಿ ಖರೀದಿಸಲು ಅವಕಾಶ ಮಾಡಲಾಗಿದೆ. ಈ ಯೋಜನೆಯ ಘಟಕ ವೆಚ್ಚ ಗರಿಷ್ಠ ರೂ.10,000 ಗಳಾಗಿದ್ದು, ಶೇ.100 ರಷ್ಟು ಸಹಾಯಧನ ನೀಡಲು ಅವಕಾಶ ಮಾಡಲಾಗಿದೆ.

2.ರಾಜ್ಯದ ಎಲ್ಲಾ ಒಳನಾಡು ಜಿಲ್ಲೆಗಳ ಕೆರೆ, ಜಲಾಶಯ ಹಾಗೂ ನದಿಭಾಗಗಳಲ್ಲಿ ಮೀನುಗಾರಿಕೆಯಲ್ಲಿ ತೊಡಗಿರುವ ಮೀನುಗಾರರಿಗೆ ಸದ್ರಿ ಯೋಜನೆಯಡಿ ಒಂದು ಫೈಬರ್‌ಗ್ಲಾಸ್ ಹರಿಗೋಲು ಹಾಗೂ ಎರಡು ಹುಟ್ಟುಗಳನ್ನು ಖರೀದಿಸಲು ಅವಕಾಶ ಮಾಡಲಾಗಿದೆ. ಇದರ ಘಟಕ ವೆಚ್ಚ ರೂ.10,000/- ಗಳಾಗಿದ್ದು ಶೇ.100 ರಷ್ಟು ಸಹಾಯಧನ ನೀಡಲಾಗುವುದು.

10. ಮಂಜುಗಡ್ಡೆ ಸ್ಥಾವರ ಉಪಯೋಗಿಸುವ ವಿದ್ಯುತ್ ಮೇಲೆ ಸಹಾಯಧನ

ಈ ಯೋಜನೆಯಡಿ ಮಂಜುಗಡ್ಡೆ ಘಟಕಗಳು ಉಪಯೋಗಿಸಿದ ವಿದ್ಯುತ್ ಮೇಲೆ ಪ್ರತಿ ಯೂನಿಟ್‌ಗೆ ರೂ.1.75 ರಂತೆ ಸಹಾಯಧನ ನೀಡಲು ಅವಕಾಶ ಕಲ್ಪಿಸಲಾಗಿದೆ. ಪ್ರತಿ ಘಟಕಕ್ಕೆ ವಾರ್ಷಿಕ ಗರಿಷ್ಠ ರೂ.3.50 ಲಕ್ಷ ಸಹಾಯಧನ ನೀಡಲಾಗುವುದು.

11. ಮೀನುಗಾರರ ಕಲ್ಯಾಣ ಯೋಜನೆಗಳು (ಕೇಂದ್ರ ಪುರಸ್ಕೃತ ಯೋಜನೆ)

ಅ) ಕಡಲ ಮೀನುಗಾರರಿಗೆ ಉಳಿತಾಯ ಮತ್ತು ಪರಿಹಾರ ಯೋಜನೆ

ಉಳಿತಾಯ ಹಾಗೂ ಪರಿಹಾರ ಯೋಜನೆಯಡಿ ಕರಾವಳಿ ಮೀನುಗಾರರಿಂದ ರೂ.1500/- ಗಳನ್ನು ಮೀನುಗಾರಿಕೆ ಅವಧಿಯಲ್ಲಿ ವಸೂಲಿ ಮಾಡಿ ಈ ಮೊತ್ತಕ್ಕೆ ಕೇಂದ್ರ ಸರ್ಕಾರ ರೂ.1500/- ಮತ್ತು ರಾಜ್ಯ ಸರ್ಕಾರ ರೂ.1500/- ಸೇರಿಸಿ ಹೀಗೆ ಒಟ್ಟು ರೂ.4500/- ಗಳನ್ನು ಮೀನುಗಾರಿಕೆ ಇಲ್ಲದ 3 ತಿಂಗಳುಗಳಲ್ಲಿ ಪ್ರತಿ ತಿಂಗಳಿಗೆ ರೂ.1500 ರಂತೆ ಪ್ರತಿ ಮೀನುಗಾರರಿಗೆ ನೀಡಲಾಗುವುದು.

ಆ) <u>ಸಾಮೂಹಿಕ ವಿಮಾ ಯೋಜನೆ:</u>

ರಾಜ್ಯದ 2.04 ಲಕ್ಷ ಮೀನುಗಾರರಿಗೆ ಗುಂಪು ವಿಮಾ ಸೌಲಭ್ಯ ಒದಗಿಸಲು ರಾಜ್ಯದ ವಿಮಾ ಕಂತನ್ನು ಪಾವತಿಸಲು ಅನುದಾನ ಒದಗಿಸಲಾಗಿದೆ. ಈ ಯೋಜನೆಯಡಿ ವಿಮಾ ಸೌಲಭ್ಯವನ್ನು ಮೀನುಗಾರಿಕೆಯಲ್ಲಿ ತೊಡಗಿರುವಾಗ ನೈಸರ್ಗಿಕ ವಿಕೋಪಗಳಿಂದ ಮರಣ ಹೊಂದಿದ ಮೀನುಗಾರರ ಅವಲಂಬಿತರಿಗೆ ಹಾಗೂ ಶಾಶ್ವತ ಅಂಗವಿಕಲರಾದ ಮೀನುಗಾರರಿಗೆ ರೂ.200,000/- ಗಳ ಪರಿಹಾರ ಮತ್ತು ಭಾಗಶಃ ಅಂಗವಿಕಲರಾದವರಿಗೆ ರೂ.100,000 ಗಳ ಪರಿಹಾರ ನೀಡಲಾಗುವುದು. ವಿಮಾ ಕಂತಿನ ಹಣ ಪ್ರತಿ ವರ್ಷ ದೆಹಲಿಯಲ್ಲಿರುವ ಮೀನುಗಾರರ ಸಹಕಾರ ಸಂಘಗಳ ರಾಷ್ಟ್ರೀಯ ಮಂಡಳಿ, ದೆಹಲಿಗೆ ಬಿಡುಗಡೆ ಮಾಡಲಾಗುವುದು.

<u>12. ವಾಣಿಜ್ಯ ಬ್ಯಾಂಕುಗಳಿಗೆ ಬಡ್ಡಿ ವ್ಯತ್ಯಾಸವನ್ನು ತುಂಬಿಕೊಡುವುದು</u>

ಮೀನುಗಾರರು ಮೀನುಗಾರಿಕೆ ಚಟುವಟಿಕೆಗಳಿಗೆ ವಾಣಿಜ್ಯ ಬ್ಯಾಂಕುಗಳಿಂದ ಅಲ್ಪಾವಧಿ ಸಾಲ ತೆಗೆದುಕೊಂಡು ಕೈಗೊಳ್ಳಲು ಅನುಕೂಲವಾಗುವಂತೆ ವ್ಯತ್ಯಾಸದ ಬಡ್ಡಿಯನ್ನು ತುಂಬಿಕೊಡಲು ಈ ಯೋಜನೆಯಡಿ ಅವಕಾಶ ಕಲ್ಪಿಸಲಾಗಿದೆ. ಮೀನುಗಾರರು ರೂ.50,000 ಗಳ ವರೆಗೆ ಸಾಲ ಪಡೆಯಲು ಅವಕಾಶವಿರುತ್ತದೆ.

ಮೀನುಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳಲು ಮಹಿಳಾ ಮೀನುಗಾರರಿಗೆ 50,000 ರೂ.ಗಳವರೆಗೆ ಶೇ.2ರ ಬಡ್ಡಿ ದರದಲ್ಲಿ ವಾಣಿಜ್ಯ / ಗ್ರಾಮೀಣ ಪ್ರಾದೇಶಿಕ ಬ್ಯಾಂಕ್‌ಗಳಿಂದ ನೀಡುತ್ತಿರುವ ಸಾಲವನ್ನು 2018-19ನೇ ಸಾಲಿನಿಂದ ಶೂನ್ಯ ಬಡ್ಡಿ ದರದಲ್ಲಿ ನೀಡಲು ಪ್ರಸ್ತಾವಿಸಲಾಗಿದೆ.

<u>13. ಮೀನುಗಾರಿಕೆ ಕೂಡು ರಸ್ತೆಗಳ ನಿರ್ವಹಣೆ</u>

ರಾಜ್ಯದ ಕರಾವಳಿಯ ಮೂರು ಜಿಲ್ಲೆಗಳಲ್ಲಿ ಒಟ್ಟು 355.13 ಕಿಮೀ ಉದ್ದದ 218 ಮೀನುಗಾರಿಕೆ ಕೊಂಡಿ ರಸ್ತೆಗಳಿರುತ್ತವೆ. ಮಳೆ ಹಾಗೂ ಮೀನು ಸಾಗಾಣಿಕೆಯಿಂದ ಈ ಮೀನುಗಾರಿಕೆ ಕೊಂಡಿ ರಸ್ತೆಗಳು ಹಾಳಾಗುತ್ತದೆ. ಇವುಗಳ ದುರಸ್ತಿ ಹಾಗೂ ನಿರ್ವಹಣೆಯನ್ನು ಕೈಗೊಳ್ಳಲಾಗುವುದು.

<u>14. ಗಿರಿ ಜನ ಉಪ ಯೋಜನೆ</u>

ಈ ಯೋಜನೆಯಡಿ ಪರಿಶಿಷ್ಟ ಪಂಗಡದ ಮೀನುಗಾರರಿಗೆ ಅನುಕೂಲವಾಗುವಂತೆ ಸಂಚಾರಿ/ ರೀಟೇಲ್ ಮೀನು ಖಾದ್ಯಗಳ ಕ್ಯಾಂಟೀನ್/ ತಾಜಾ ಮೀನು ಮಾರಾಟ ಮಳಿಗೆ ಸ್ಥಾಪಿಸಲು ಸಹಾಯ (ಘಟಕ ವೆಚ್ಚ ರೂ.10.00 ಲಕ್ಷ ; ಸಹಾಯಧನ : ಶೇ.70 ರಷ್ಟು ಗರಿಷ್ಠ ರೂ.7.00 ಲಕ್ಷ) ನೆರವು ನೀಡಲಾಗುವುದು.

<u>4405-ಬಂಡವಾಳ ಹೂಡಿಕೆಗಳು</u>

<u>15. ಮೀನುಗಾರಿಕೆ ಬಂದರುಗಳ ಹೂಳೆತ್ತುವಿಕೆ(ಕೇಂದ್ರ ಪುರಸ್ಕೃತ ಯೋಜನೆ)</u>

ಮೀನುಗಾರಿಕೆ ಬಂದರುಗಳು ಮತ್ತು ಇಳಿದಾಣಗಳಲ್ಲಿ ಮೀನುಗಾರಿಕೆ ದೋಣಿಗಳ ಸುಗಮ ಸಂಚಾರಕ್ಕೆ ಅನುಕೂಲವಾಗಲು ಹೂಳೆತ್ತಲು ಅವಕಾಶ ಕಲ್ಪಿಸಲಾಗಿದೆ. ಕೇಂದ್ರ ಸರ್ಕಾರವು ಪ್ರತಿಶತ 60 ರಷ್ಟನ್ನು ಯೋಜನಾ ವೆಚ್ಚವನ್ನು ಮತ್ತು ರಾಜ್ಯ ಸರ್ಕಾರವು ಪ್ರತಿಶತ 40 ರಷ್ಟನ್ನು ಯೋಜನಾ ವೆಚ್ಚವನ್ನು ಭರಿಸುತ್ತದೆ. ಕೇಂದ್ರ ಸರ್ಕಾರದಿಂದ ಮಂಜೂರಾದ ಕಾಮಗಾರಿಗಳಿಗೆ ಅನುದಾನ ಒದಗಿಸಲಾಗುವುದು.

16. ಮೀನುಗಾರಿಕೆ ಬಂದರುಗಳ ನಿರ್ಮಾಣ (ಕೇಂದ್ರ ಪುರಸ್ಕೃತ ಯೋಜನೆ)

ಮಂಜೂರಾದ ಮೀನುಗಾರಿಕೆ ಬಂದರುಗಳ ಕಾಮಗಾರಿ ಮುಂದುವರಿಕೆಗೆ ಹಾಗೂ ಹೊಸ ಯೋಜನೆಗಳ ಕೈಗೊಳ್ಳಲು ಅವಕಾಶ ಮಾಡಲಾಗಿದೆ. ಪರಿಷ್ಕೃತ ಮಾರ್ಗಸೂಚಿಗಳ ಪ್ರಕಾರ ಕೇಂದ್ರ ಸರ್ಕಾರವು ಪ್ರತಿಶತ 60 ರಷ್ಟು ಮತ್ತು ರಾಜ್ಯ ಸರ್ಕಾರವು ಪ್ರತಿಶತ 40 ರಷ್ಟನ್ನು ಭರಿಸುತ್ತದೆ.

17. ಮೀನುಗಾರಿಕೆ ಜೆಟ್ಟಿ ಮತ್ತು ಇಳಿದಾಣಗಳ ನಿರ್ಮಾಣ ಮತ್ತು ನವೀಕರಣ

ಮೀನುಗಾರಿಕೆ ಇಳಿದಾಣ ಕೇಂದ್ರಗಳ ನಿರ್ಮಾಣ ಹಾಗೂ ನವೀಕರಣಕ್ಕೆ ಅವಕಾಶ ಕಲ್ಪಿಸಲಾಗಿದೆ. ಈ ಲೆಕ್ಕ ಶೀರ್ಷಿಕೆಯಡಿ ಪ್ರಗತಿಯಲ್ಲಿರುವ ಕೊಡೇರಿ ಮೀನುಗಾರಿಕೆ ಬಂದರಿನ ಹಾಗೂ ತೆಂಗಿನಗುಂಡಿ ಅಳ್ವೆಕೋಡಿ ಮೀನುಗಾರಿಕೆ ತಂಗುದಾಣದ ಕಾಮಗಾರಿಗಳನ್ನು ಮುಂದುವರಿಸಲು ಹಾಗೂ ಮರವಂತೆ, ಶಿರೂರು-ಅಳ್ವೆಗದ್ದೆ ಮತ್ತು ಕುಂದಾಪುರ ಕೋಡಿಯಲ್ಲಿ ಬಂದರು ಮತ್ತು ತಡೆಗೋಡೆಗಳ ಕಾಮಗಾರಿಗಳನ್ನು ಪ್ರಾರಂಭಿಸಲು ಹಾಗೂ ಭಟ್ಕಳ ಮತ್ತು ಕಾರವಾರ ಮೀನುಗಾರಿಕೆ ಬಂದರುಗಳಲ್ಲಿಯ ಧಕ್ಕೆಗಳನ್ನು ವಿಸ್ತರಿಸಲು ಅನುದಾನ ನೀಡಲಾಗಿದೆ.

18. ಮೀನುಗಾರಿಕೆ ಕೊಂಡಿ ರಸ್ತೆಗಳ ಸೇತುವೆಗಳ ಮತ್ತು ಜೆಟ್ಟಿಗಳ ನಿರ್ಮಾಣ ನಬಾರ್ಡ್ ಸಹಾಯ

ಈ ಲೆಕ್ಕ ಶೀರ್ಷಿಕೆಯಡಿ ನಬಾರ್ಡ್ ನೆರವಿನೊಂದಿಗೆ ಗ್ರಾಮೀಣ ಪ್ರದೇಶಗಳಲ್ಲಿ ಮೀನುಗಾರಿಕೆ ರಸ್ತೆ, ಸೇತುವೆ ಮತ್ತು ಜೆಟ್ಟಿಗಳ ನಿರ್ಮಾಣ, ಶುಚಿಯಾದ ಮೀನುಮಾರುಕಟ್ಟೆಗಳ ನಿರ್ಮಾಣ, ಮೀನು ಮರಿ ಉತ್ಪಾದನಾ ಕೇಂದ್ರಗಳ ಆಧುನೀಕರಣ ಕಾಮಗಾರಿಗಳನ್ನು ತೆಗೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಈಗಾಗಲೇ ಮಂಜೂರಾದ ಕಾಮಗಾರಿಗಳನ್ನು ಪ್ರಾರಂಭಿಸಲು/ ಮುಂದುವರಿಸಲು ಅನುದಾನ ಒದಗಿಸಲಾಗಿದೆ.

ಜಿಲ್ಲಾ ಪಂಚಾಯತ್ ಯೋಜನೆಗಳು

1. ಮೀನುಗಾರಿಕೆ ಕಟ್ಟಡಗಳು ಮತ್ತು ಸೌಲಭ್ಯಗಳ ನಿರ್ಮಾಣ ಮತ್ತು ನಿರ್ವಹಣೆ

ಈ ಲೆಕ್ಕ ಶೀರ್ಷಿಕೆಯಡಿ ಕಛೇರಿ ಕಟ್ಟಡಗಳ ನಿರ್ಮಾಣ ಮತ್ತು ನಿರ್ವಹಣೆ, ಮೀನು ಮರಿ ಉತ್ಪಾದನಾ ಕೇಂದ್ರಗಳ ಮತ್ತು ತಾಲ್ಲೂಕು ಮಟ್ಟದ ನರ್ಸರಿಗಳ ದುರಸ್ತಿ ಮತ್ತು ಸುಧಾರಣೆ, ಕರಾವಳಿ ಜಿಲ್ಲೆಗಳಲ್ಲಿ ಮೀನುಗಾರಿಕೆ ಜೆಟ್ಟಿಗಳ, ಇಳಿದಾಣ ಕೇಂದ್ರಗಳ, ಹರಾಜು ಪ್ರಾಂಗಣಗಳ ನಿರ್ಮಾಣ ಮತ್ತು ನಿರ್ವಹಣೆ, ಕಾರವಾರ, ಹಾಸನ, ಬೆಳಗಾವಿ, ಕಲಬುರ್ಗಿ, ದಕ್ಷಿಣ ಕನ್ನಡ, ಬೀದರ್, ಕೋಲಾರ, ಕೊಡಗು ಮತ್ತು ವಿಜಯಪುರ ಜಿಲ್ಲೆಗಳ ಮತ್ಸ್ಯಾಲಯಗಳ ನಿರ್ವಹಣೆ ವೆಚ್ಚ ಮತ್ತು ಇತರ ಸಾಮಗ್ರಿಗಳ ಖರೀದಿಗೆ ಅನುದಾನವನ್ನು ಒದಗಿಸಲಾಗಿದೆ.

2. ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ

ಈ ಯೋಜನೆಯಡಿ ಜೌಗು ಹಾಗೂ ಚೌಳು ಪ್ರದೇಶಗಳಲ್ಲಿ ಒಂದು ಎಕರೆ ಮೀನು ಕೃಷಿ ಕೊಳ ನಿರ್ಮಿಸಲು ಪ್ರತಿ ಎಕರೆ ಮೀನು ಕೃಷಿ ಕೊಳ ನಿರ್ಮಾಣ ಹಾಗೂ ಮೊದಲ ವರ್ಷದ ಆವರ್ತಕ ವೆಚ್ಚದ ಶೇಕಡ 25 ರಷ್ಟು ಅಂದರೆ ಗರಿಷ್ಠ ರೂ.30,000/- ಸಹಾಯಧನವಾಗಿ ನೀಡಲಾಗುತ್ತದೆ. ಹುಲ್ಲುಗೆಂಡೆ ಮೀನುಮರಿಗಳನ್ನು ಕೆರೆಗಳಲ್ಲಿ ಬಿತ್ತನೆ ಮಾಡಿದ ಕೃಷಿಕರಿಗೆ ಶೇಕಡ 50 ರಷ್ಟು ಗರಿಷ್ಠ ರೂ.5000 ಗಳಿಗೆ ಮೀರದಂತೆ ಸಹಾಯಧನವನ್ನು ನೀಡಲಾಗುವುದು ಹಾಗೂ ಬಾವಿ ಮತ್ತು ನೀರಾವರಿ

ಹೊಂಡಗಳಲ್ಲಿ ಮೀನು ಕೃಷಿಗಾಗಿ 250 ಸಾಮಾನ್ಯ ಗೆಂಡೆ ಮರಿಗಳನ್ನು ಉಚಿತವಾಗಿ ಸರಬರಾಜು ಮಾಡಿ ಮೀನು ಕೃಷಿಯನ್ನು ಪ್ರೋತ್ಸಾಹಿಸಲಾಗುವುದು.

ಈ ಯೋಜನೆಯಡಿ ಅನುದಾನವನ್ನು ಮೀನುಮರಿ ಕೇಂದ್ರದಲ್ಲಿ ಮೀನುಮರಿ ಉತ್ಪಾದನೆಗೆ, ತಾಲ್ಲೂಕು ಮಟ್ಟದ ನರ್ಸರಿಗಳಲ್ಲಿ, ಫಾರಂಗಳಲ್ಲಿ, ಕೇಜ್ ಮತ್ತು ಪೆನ್‌ಗಳಲ್ಲಿ ಮೀನುಮರಿ ಪಾಲನೆಗೆ, ಹಾಗೂ ನಿರ್ವಹಣೆಗೆ ತಗಲುವ ವೆಚ್ಚಗಳಿಗೆ, ಮೀನುಮರಿ ಖರೀದಿ ಮತ್ತು ಸಾಗಾಣಿಕೆಗೆ, ವಾಹನಗಳ ಖರೀದಿ, ನಿರ್ವಹಣೆ ಮತ್ತು ಇತರ ಸಲಕರಣೆಗಳ ಖರೀದಿಗೆ ಉಪಯೋಗಿಸಲು ಅವಕಾಶ ಕಲ್ಪಿಸಲಾಗಿದೆ.

3. ಮೀನು ಮಾರುಕಟ್ಟೆಗಳ ನಿರ್ಮಾಣ ಮತ್ತು ಮೀನು ಮಾರಾಟಕ್ಕೆ ಸಹಾಯ

ಮೀನುಗಾರರು ಮೀನನ್ನು ತಾಜಾ ಹಾಗೂ ಆರೋಗ್ಯಕರ ಸ್ಥಿತಿಯಲ್ಲಿ ಮಾರಾಟ ಮಾಡಲು ಅನುಕೂಲವಾಗುವಂತೆ ಶಾಖ ನಿರೋಧಕ ಪೆಟ್ಟಿಗೆ ಮತ್ತು ಸೈಕಲ್ಲುಗಳನ್ನು ಖರೀದಿಸಲು ಪ್ರತಿಶತ 50ರ ನೆರವಿನೊಂದಿಗೆ ಗರಿಷ್ಠ ರೂ.2000 ಸಹಾಯ ಧನವನ್ನು ಹಾಗೂ ದ್ವಿಚಕ್ರ ವಾಹನ ಮತ್ತು ಶಾಖ ನಿರೋಧಕ ಪೆಟ್ಟಿಗೆ ಖರೀದಿಸಲು ಶೇ.25 ರಷ್ಟು ಗರಿಷ್ಠ ರೂ.10000/- ಗಳ ಸಹಾಯಧನವನ್ನು ನೀಡಲಾಗುವುದು.

ಇಳಿದಾಣ ಕೇಂದ್ರಗಳಿಂದ ತಾಜಾ ಮೀನನ್ನು ಆರೋಗ್ಯಕರ ರೀತಿಯಲ್ಲಿ ಮಾರಾಟ ಸ್ಥಳಗಳಿಗೆ ತ್ವರಿತ ಸಾಗಾಣಿಕೆಗಾಗಿ ಮೀನುಗಾರರಿಗೆ ವಾಹನವನ್ನು ಖರೀದಿಸಲು ಆರ್ಥಿಕ ನೆರವನ್ನು ನೀಡುವ ಉದ್ದೇಶದಿಂದ "ಮತ್ಸ್ಯವಾಹಿನಿ" ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ತ್ರಿಚಕ್ರ ಟೆಂಪೋ ರಿಕ್ಷಾವನ್ನು ಖರೀದಿಸಲು ಶೇ.25 ರಷ್ಟು ಗರಿಷ್ಠ ರೂ.30,000 ಗಳ ಸಹಾಯಧನವನ್ನು ಹಾಗೂ ನಾಲ್ಕು ಚಕ್ರದ ವಾಹನ ಖರೀದಿಸಲು ಶೇ.25 ರಷ್ಟು ಗರಿಷ್ಠ ರೂ.35,000 ಗಳ ಸಹಾಯಧನವನ್ನು ಮೂರು ಅಥವಾ ನಾಲ್ಕು ಫಲಾನುಭವಿಗಳ ಒಂದು ಗುಂಪಿಗೆ ನೀಡಲಾಗುವುದು.

ಇದಲ್ಲದೆ ಸದರಿ ಯೋಜನೆಯಡಿ ಯಾಂತ್ರೀಕೃತವಲ್ಲದ (ಪಾತಿ) ದೋಣಿ ಹೊಂದಿರುವ ಮೀನುಗಾರರಿಗೆ ಮೀನುಗಾರಿಕೆ ಸಲಕರಣೆಗಳನ್ನು ಗರಿಷ್ಠ ರೂ.10000/- ಗಳ ಘಟಕ ವೆಚ್ಚದಲ್ಲಿ ಖರೀದಿಸಲು ಮತ್ತು ಪ್ರತಿಶತ 50 ರಷ್ಟು ಅಂದರೆ ಗರಿಷ್ಠ ರೂ.5000/- ಗಳನ್ನು ಸಹಾಯಧನವಾಗಿ ನೀಡಲು ಅವಕಾಶ ಕಲ್ಪಿಸಲಾಗಿದೆ.

4.ಪ್ರದರ್ಶನ ಮತ್ತು ತರಬೇತಿ

ಮೀನು ಕೃಷಿಯ ಹಿತದೃಷ್ಟಿಯಿಂದ ಸಾರ್ವಜನಿಕರ ಮಾಹಿತಿಗಾಗಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ನಡೆಯುವ ವಸ್ತು ಪ್ರದರ್ಶನದಲ್ಲಿ ಮೀನುಗಾರಿಕಾ ಇಲಾಖಾ ಕಾರ್ಯಕ್ರಮಗಳ ಬಗ್ಗೆ ಪ್ರದರ್ಶಿಸಲಾಗುವುದು. ಹಾಗೂ ಆಸಕ್ತಿ ಹೊಂದಿದ ಕೃಷಿಕರಿಗೆ ಮೀನು ಕೃಷಿಯ ಬಗ್ಗೆ ತರಬೇತಿ ನೀಡುವುದು. ಮತ್ಸ್ಯಪಾಲನೆ ಮತ್ತು ಇಲಾಖಾ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಲಾಗುವುದು.

ಈ ಯೋಜನೆಗಳಲ್ಲದೆ ಮೀನುಗಾರಿಕೆ ಇಲಾಖೆಯಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

- ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ:

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಮೀನು ಮರಿ ಉತ್ಪಾದನಾ ಕೇಂದ್ರಗಳ ಉನ್ನತೀಕರಣ, ಮೀನುಗಾರಿಕೆ ಸಲಕರಣೆ ಕಿಟ್ ವಿತರಣೆ, ಫೈಬರ್ ಗ್ಲಾಸ್ ಹರಿಗೋಲು ವಿತರಣೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

- ಕೆರೆಗಳ ಅಭಿವೃದ್ಧಿ:

ರಾಜ್ಯದಲ್ಲಿರುವ ಒಳನಾಡು ಜಲಸಂಪನ್ಮೂಲಗಳನ್ನು ಅಭಿವೃದ್ಧಿ ಪಡಿಸಲು ಹೊಸ ಗುತ್ತಿಗೆ ನಿಯಮಾವಳಿಗಳನ್ನು ರೂಪಿಸಿದ್ದು, ಈ ನಿಯಮಾವಳಿ ಪ್ರಕಾರ ಈ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕಿನ ಗುತ್ತಿಗೆಯನ್ನು ಪಡೆಯಲು ನೋಂದಾಯಿಸಲ್ಪಟ್ಟ ಮೀನುಗಾರರ ಸಹಕಾರ ಸಂಘಗಳಿಗೆ ಅವಕಾಶ ಕಲ್ಪಿಸಲಾಗಿದೆ. ಗುತ್ತಿಗೆಗೆ ಕೋರದ ಕೆರೆಗಳನ್ನು ಸಾರ್ವಜನಿಕವಾಗಿ ಟೆಂಡರ್ ಕಂ ಹರಾಜು ಮೂಲಕ ವಿಲೇವಾರಿ ಮಾಡಿ ಅಭಿವೃದ್ಧಿಪಡಿಸಲಾಗುವುದು. ಕೆರೆಗಳ ಶೇ.50ರ ಜಲ ವಿಸ್ತೀರ್ಣವನ್ನು ಗಣನೆಗೆ ತೆಗೆದುಕೊಂಡು ಪ್ರತಿ ಹೆಕ್ಟೇರ್ ಜಲ ವಿಸ್ತೀರ್ಣಕ್ಕೆ ರೂ.300/- ರಂತೆ ಹಾಗೂ ಹಿಂದಿನ 3 ವರ್ಷಗಳ ಸರಾಸರಿ ಗುತ್ತಿಗೆ ಮೊತ್ತ, ಇವುಗಳಲ್ಲಿ ಯಾವುದು ಹೆಚ್ಚೋ ಆ ಮೊತ್ತವನ್ನು ಗುತ್ತಿಗೆ ಮೊತ್ತವಾಗಿ ನಿಗದಿಪಡಿಸಿ ಗರಿಷ್ಠ 5 ವರ್ಷಗಳ ಅವಧಿಗೆ ಮೀನುಕೃಷಿಗೆ ನೀಡಲಾಗುವುದು.

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಸ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 413 ರ

ಅನುಬಂಧ-02

ಮೀನುಮರಿ ಉತ್ಪಾದನಾ ಕೇಂದ್ರಗಳ ವಿವರ

ಕ್ರಮ ಸಂಖ್ಯೆ	ವಲಯ	ಜಿಲ್ಲೆ	ತಾಲ್ಲೂಕು	ರಾಜ್ಯವಲಯ ವ್ಯಾಪ್ತಿ /ಜಿಲ್ಲಾ ಪಂಚಾಯತ್ ವ್ಯಾಪ್ತಿ	ಮೀನುಮರಿ ಕೇಂದ್ರದ ಹೆಸರು	ಷರಾ
1	ಬೆಂಗಳೂರು	ಬೆಂಗಳೂರು ನಗರ	ಬೆಂಗಳೂರು ಉತ್ತರ	ರಾಜ್ಯ ವಲಯ	ಹೆಸರಘಟ್ಟ ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ
2	ಬೆಂಗಳೂರು	ಕೋಲಾರ	ಕೆ.ಜಿ.ಎಫ್.	ರಾಜ್ಯ ವಲಯ	ಬೇತಮಂಗಲ ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ
3	ಬೆಂಗಳೂರು	ಕೋಲಾರ	ಬಂಗಾರಪೇಟೆ	ರಾಜ್ಯ ವಲಯ	ಮಾರ್ಕಂಡೇಯ ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ
4	ಬೆಂಗಳೂರು	ಚಿಕ್ಕಬಳ್ಳಾಪುರ	ಗೌರಿಬಿದನೂರು	ರಾಜ್ಯ ವಲಯ	ತಿಪ್ಪಗಾನಹಳ್ಳಿ ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ
5	ಬೆಂಗಳೂರು	ತುಮಕೂರು	ಕುಣಿಗಲ್	ರಾಜ್ಯ ವಲಯ	ಮಾರ್ಕೋನಹಳ್ಳಿ ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ
6	ಬೆಳಗಾವಿ	ಬೆಳಗಾವಿ	ಹುಕ್ಕೇರಿ	ರಾಜ್ಯ ವಲಯ	ಹಿಡಕಲ್ ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ
7	ಬಳ್ಳಾರಿ	ಕೊಪ್ಪಳ	ಕೊಪ್ಪಳ	ರಾಜ್ಯ ವಲಯ	ಶಿವಪುರ ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ
8	ಮೈಸೂರು	ಕೊಡಗು	ಸೋಮವಾರಪೇಟೆ	ರಾಜ್ಯ ವಲಯ	ಹಾರಂಗಿ ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ
9	ಮೈಸೂರು	ಮೈಸೂರು	ಹೆಚ್.ಡಿ.ಕೋಟೆ	ರಾಜ್ಯ ವಲಯ	ಕಬಿನಿ ಕೃಗಾರಿಕಾ ವಸಹತು ಪ್ರದೇಶ ಉತ್ಪಾದನಾ ಮತ್ತು ಪಾಲನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ

10	ಮೈಸೂರು	ಮೈಸೂರು	ಹೆಚ್.ಡಿ.ಕೋಟೆ	ರಾಜ್ಯ ವಲಯ	ಕಬಿನಿ ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ
11	ಮೈಸೂರು	ಮೈಸೂರು	ಸರಗೂರು	ರಾಜ್ಯ ವಲಯ	ನುಗು ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ
12	ಮೈಸೂರು	ಚಾಮರಾಜನಗರ	ಕೊಳ್ಳೇಗಾಲ	ರಾಜ್ಯ ವಲಯ	ಗುಂಡಾಲ್ ಮೀನುಮರಿ ಉತ್ಪಾದನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ
13	ಮೈಸೂರು	ಮಂಡ್ಯ	ಮಂಡ್ಯ	ರಾಜ್ಯ ವಲಯ	ಬೂದನೂರು ಮೀನುಮರಿ ಉತ್ಪಾದನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ
14	ಶಿವಮೊಗ್ಗ	ಶಿವಮೊಗ್ಗ	ಭದ್ರಾವತಿ	ರಾಜ್ಯ ವಲಯ	ಬಂಡ್ ಬ್ರೀಡಿಂಗ್ ಮೀನುಮರಿ ಉತ್ಪಾದನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ
15	ಶಿವಮೊಗ್ಗ	ಶಿವಮೊಗ್ಗ	ಭದ್ರಾವತಿ	ರಾಜ್ಯ ವಲಯ	ರಾಷ್ಟ್ರೀಯ ಮೀನುಮರಿ ಉತ್ಪಾದನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ
16	ಶಿವಮೊಗ್ಗ	ಶಿವಮೊಗ್ಗ	ಶಿವಮೊಗ್ಗ	ರಾಜ್ಯ ವಲಯ	ಗಾಜನೂರು ಮೀನುಮರಿ ಉತ್ಪಾದನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ

ಅನುಬಂಧ-02

ಮೀನುಮರಿ ಪಾಲನಾ ಕೇಂದ್ರಗಳ ವಿವರ

ಕ್ರಮ ಸಂಖ್ಯೆ	ವಲಯ	ಜಿಲ್ಲೆ	ತಾಲ್ಲೂಕು	ರಾಜ್ಯವಲಯ ವ್ಯಾಪ್ತಿ /ಜಿಲ್ಲಾ ಪಂಚಾಯತ್ ವ್ಯಾಪ್ತಿ	ಮೀನುಮರಿ ಕೇಂದ್ರದ ಹೆಸರು	ಷರಾ
1	ಬೆಂಗಳೂರು	ರಾಮನಗರ	ರಾಮನಗರ	ರಾಜ್ಯ ವಲಯ	ನಲ್ಲಿಗುಡ್ಡ ಮೀನುಮರಿ ಪಾಲನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ
2	ಬೆಂಗಳೂರು	ರಾಮನಗರ	ಚನ್ನಪಟ್ಟಣ	ರಾಜ್ಯ ವಲಯ	ಕಣ್ವ ಮೀನುಮರಿ ಪಾಲನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ
3	ಬೆಂಗಳೂರು	ಚಿಕ್ಕಬಳ್ಳಾಪುರ	ಶಿಡ್ಲಘಟ್ಟ	ರಾಜ್ಯ ವಲಯ	ಆನೂರು ಮೀನುಮರಿ ಪಾಲನಾ ಕೇಂದ್ರ	ಕಾರ್ಯನಿರ್ವಹಿಸುತ್ತಿಲ್ಲ.
4	ಬೆಂಗಳೂರು	ತುಮಕೂರು	ತುಮಕೂರು	ರಾಜ್ಯ ವಲಯ	ಊರುಕೆರೆ ಮೀನುಮರಿಪಾಲನಾ ಕೇಂದ್ರ	ಕಾರ್ಯನಿರ್ವಹಿಸುತ್ತಿಲ್ಲ.
5	ಬೆಂಗಳೂರು	ತುಮಕೂರು	ಚಿಕ್ಕನಾಯಕನಹಳ್ಳಿ	ರಾಜ್ಯ ವಲಯ	ಬೋರನಕಣಿವೆ ಮೀನುಮರಿ ಪಾಲನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ
6	ಬೆಂಗಳೂರು	ತುಮಕೂರು	ತಿಪಟೂರು	ರಾಜ್ಯ ವಲಯ	ಈಡೇನಹಳ್ಳಿ ನರ್ಸರಿ (ತಿಪಟೂರು)	ಕಾರ್ಯನಿರ್ವಹಿಸುತ್ತಿದೆ
7	ಬೆಳಗಾವಿ	ಬೆಳಗಾವಿ	ಸವದತ್ತಿ	ರಾಜ್ಯ ವಲಯ	ಮಲಪ್ರಭಾ ಮೀನುಮರಿ ಪಾಲನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ
8	ಬೆಳಗಾವಿ	ಬೆಳಗಾವಿ	ಬೆಳಗಾವಿ	ಜಿಲ್ಲಾ ಪಂಚಾಯತ್	ರಕ್ಕಸಕೊಪ್ಪ ಮೀನುಮರಿ ಪಾಲನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ
9	ಬೆಳಗಾವಿ	ಧಾರವಾಡ	ಕಲಘಟಗಿ	ರಾಜ್ಯ ವಲಯ	ನೀರಸಾಗರ ಮೀನುಮರಿ ಪಾಲನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ

10	ಬೆಳಗಾವಿ	ಬಿಜಾಪುರ	ಮುದ್ದೇಬಿಹಾಳ	ರಾಜ್ಯವಲಯ	ನಾರಾಯಣಪುರ ಮೀನುಮರಿ ಪಾಲನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ
11	ಬಳ್ಳಾರಿ	ಬಳ್ಳಾರಿ	ಹಗರಿಬೊಮ್ಮನಹಳ್ಳಿ	ರಾಜ್ಯವಲಯ	ಹಗರಿಬೊಮ್ಮನಹಳ್ಳಿ ಮೀನುಮರಿ ಪಾಲನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ
12	ಬಳ್ಳಾರಿ	ಬಳ್ಳಾರಿ	ಬಳ್ಳಾರಿ	ಜಿಲ್ಲಾ ಪಂಚಾಯತ್	ಮೋಕ ಮೀನುಮರಿ ಪಾಲನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ
13	ಬಳ್ಳಾರಿ	ಬೀದರ್	ಬೀದರ್	ರಾಜ್ಯವಲಯ	ಕಾರಂಜಾ ಮೀನುಮರಿ ಪಾಲನಾ ಕೇಂದ್ರ	ಕಾರ್ಯನಿರ್ವಹಿಸುತ್ತಿಲ್ಲ.
14	ಬಳ್ಳಾರಿ	ಬಳ್ಳಾರಿ	ಕೊಪ್ಪಳ	ರಾಜ್ಯವಲಯ	ಮುನಿರಾಬಾದ್ ಮೀನುಮರಿ ಪಾಲನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ
15	ಮೈಸೂರು	ಮೈಸೂರು	ಹುಣಸೂರು	ರಾಜ್ಯವಲಯ	ಮೀನುಮರಿ ಉತ್ಪಾದನಾಪಾಲನಾ ಕೇಂದ್ರ,ಕರಿಮುದ್ದನಹಳ್ಳಿ	ಕಾರ್ಯನಿರ್ವಹಿಸುತ್ತಿದೆ

16	ಮೈಸೂರು	ಮೈಸೂರು	ಹುಣಸೂರು	ಜಿಲ್ಲಾ ಪಂಚಾಯತ್	ಹುಣಸೂರು ಮೀನುಮರಿ ಪಾಲನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ
17	ಮೈಸೂರು	ಮಂಡ್ಯ	ಶ್ರೀರಂಗಪಟ್ಟಣ	ಜಿಲ್ಲಾ ಪಂಚಾಯತ್	ಕೆ.ಆರ್ ಸಾಗರ ಮೀನುಮರಿ ಪಾಲನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ
18	ಮೈಸೂರು	ಮಂಡ್ಯ	ಮಂಡ್ಯ	ಜಿಲ್ಲಾ ಪಂಚಾಯತ್	ವಿಶ್ವೇಶ್ವರಯ್ಯ ಮೀನುಮರಿ ಪಾಲನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ
19	ಮೈಸೂರು	ಹಾಸನ	ಹಾಸನ	ಜಿಲ್ಲಾ ಪಂಚಾಯತ್	ಗೊರೂರು ಮೀನುಮರಿ ಪಾಲನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ
20	ಮೈಸೂರು	ಹಾಸನ	ಅರಕಲಗೂಡು	ಜಿಲ್ಲಾ ಪಂಚಾಯತ್	ರಾಮನಾಥಪುರ ಮೀನುಮರಿ ಪಾಲನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ
21	ಮೈಸೂರು	ಹಾಸನ	ಹೊಳೆನರಸೀಪುರ	ರಾಜ್ಯವಲಯ	ಶ್ರೀರಾಮದೇವರಕಟ್ಟೆ ಮೀನುಮರಿ ಪಾಲನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ
22	ಮೈಸೂರು	ಹಾಸನ	ಹಾಸನ	ಜಿಲ್ಲಾ ಪಂಚಾಯತ್	ಹಾಸನ ಮೀನುಮರಿ ಪಾಲನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ
23	ಶಿವಮೊಗ್ಗ	ಚಿಕ್ಕಮಗಳೂರು	ಚಿಕ್ಕಮಗಳೂರು	ಜಿಲ್ಲಾ ಪಂಚಾಯತ್	ಅಗಸನಕಟ್ಟೆ ಮೀನುಮರಿ ಪಾಲನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ
24	ಶಿವಮೊಗ್ಗ	ಚಿಕ್ಕಮಗಳೂರು	ಕಡೂರು	ಜಿಲ್ಲಾ ಪಂಚಾಯತ್	ಅಯ್ಯನಕೆರೆ ಮೀನುಮರಿ ಪಾಲನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ
25	ಶಿವಮೊಗ್ಗ	ದಾವಣಗೆರೆ	ಚನ್ನಗಿರಿ	ರಾಜ್ಯವಲಯ	ಶಾಂತಿಸಾಗರ ಮೀನುಮರಿ ಪಾಲನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ
26	ಶಿವಮೊಗ್ಗ	ದಾವಣಗೆರೆ	ಹರಿಹರ	ಜಿಲ್ಲಾ ಪಂಚಾಯತ್	ಕೊಂಡಜ್ಜಿ ಮೀನುಮರಿ ಪಾಲನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ
27	ಶಿವಮೊಗ್ಗ	ಶಿವಮೊಗ್ಗ	ಶಿಕಾರಿಪುರ	ಜಿಲ್ಲಾ ಪಂಚಾಯತ್	ಅಂಜನಾಪುರ ಮೀನುಮರಿ ಉತ್ಪಾದನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ

28	ಶಿವಮೊಗ್ಗ	ಶಿವಮೊಗ್ಗ	ಭದ್ರಾವತಿ	ರಾಜ್ಯ ವಲಯ	ಮೆಣಸನಹಳ್ಳಿ ಮೀನುಮರಿ ಪಾಲನಾ ಕೇಂದ್ರ, ಬಿ.ಆರ್.ಪಿ	ಕಾರ್ಯನಿರ್ವಹಿಸುತ್ತಿದೆ
29	ಶಿವಮೊಗ್ಗ	ಚಿತ್ರದುರ್ಗ	ಹಿರಿಯೂರು	ರಾಜ್ಯ ವಲಯ	ವಿ.ವಿ.ಸಾಗರ ಮೀನುಮರಿ ಪಾಲನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ
30	ಮಂಗಳೂರು	ಉಡುಪಿ	ಕಾರ್ಕಳ	ಜಿಲ್ಲಾ ಪಂಚಾಯತ್	ಕಾರ್ಕಳ ಮೀನುಮರಿ ಪಾಲನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ

ಅನುಬಂಧ-02

ನರ್ಸರಿಗಳ ವಿವರ

ಕ್ರಮ ಸಂಖ್ಯೆ	ವಲಯ	ಜಿಲ್ಲೆ	ತಾಲ್ಲೂಕು	ರಾಜ್ಯವಲಯ ವ್ಯಾಪ್ತಿ /ಜಿಲ್ಲಾ ಪಂಚಾಯತ್ ವ್ಯಾಪ್ತಿ	ಮೀನುಮರಿ ಕೇಂದ್ರದ ಹೆಸರು	ಷರಾ
1	ಬೆಂಗಳೂರು	ಬೆಂಗಳೂರು ನಗರ	ಆನೇಕಲ್	ರಾಜ್ಯ ವಲಯ	ಆನೇಕಲ್ ನರ್ಸರಿ	ಕಾರ್ಯನಿರ್ವಹಿಸುತ್ತಿದೆ
2	ಬೆಂಗಳೂರು	ಬೆಂಗಳೂರು ಗ್ರಾಮಾಂತರ	ಹೊಸಕೋಟೆ	ರಾಜ್ಯ ವಲಯ	ಹೊಸಕೋಟೆ ನರ್ಸರಿ	ಕಾರ್ಯನಿರ್ವಹಿಸುತ್ತಿದೆ
3	ಬೆಂಗಳೂರು	ಚಿಕ್ಕಬಳ್ಳಾಪುರ	ಚಿಂತಾಮಣಿ	ರಾಜ್ಯ ವಲಯ	ಚಿಂತಾಮಣಿ ನರ್ಸರಿ	ಕಾರ್ಯನಿರ್ವಹಿಸುತ್ತಿದ
4	ಬೆಂಗಳೂರು	ತುಮಕೂರು	ಕೊರಟಗೆರೆ	ರಾಜ್ಯ ವಲಯ	ಕೊರಟಗೆರೆ ನರ್ಸರಿ	ಕಾರ್ಯನಿರ್ವಹಿಸುತ್ತಿದ
5	ಬೆಂಗಳೂರು	ತುಮಕೂರು	ಶಿರಾ	ರಾಜ್ಯ ವಲಯ	ಶಿರಾ ನರ್ಸರಿ	ಕಾರ್ಯನಿರ್ವಹಿಸುತ್ತಿದೆ
6	ಬೆಂಗಳೂರು	ತುಮಕೂರು	ತುರುವೇಕೆರೆ	ರಾಜ್ಯ ವಲಯ	ತುರುವೇಕೆರೆ ನರ್ಸರಿ	ಕಾರ್ಯನಿರ್ವಹಿಸುತ್ತಿದ
7	ಬೆಂಗಳೂರು	ತುಮಕೂರು	ಗುಬ್ಬಿ	ರಾಜ್ಯ ವಲಯ	ಗುಬ್ಬಿ ನರ್ಸರಿ	ಕಾರ್ಯನಿರ್ವಹಿಸುತ್ತಿದೆ
8	ಬೆಂಗಳೂರು	ತುಮಕೂರು	ಮಧುಗಿರಿ	ರಾಜ್ಯ ವಲಯ	ಮಧುಗಿರಿ ನರ್ಸರಿ	ಕಾರ್ಯನಿರ್ವಹಿಸುತ್ತಿದ

9	ಬೆಳಗಾವಿ	ಬಾಗಲಕೋಟೆ	ಜಮಖಂಡಿ	ಜಿಲ್ಲಾ ಪಂಚಾಯತ್	ಜಮಖಂಡಿ ನರ್ಸರಿ	ಕಾರ್ಯನಿರ್ವಹಿಸುತ್ತಿದೆ
10	ಬೆಳಗಾವಿ	ಹಾವೇರಿ	ಹಾನಗಲ್	ಜಿಲ್ಲಾ ಪಂಚಾಯತ್	ಹಾನಗಲ್ ನರ್ಸರಿ	ಕಾರ್ಯನಿರ್ವಹಿಸುತ್ತಿದೆ
11	ಬೆಳಗಾವಿ	ಹಾವೇರಿ	ಹಾವೇರಿ	ಜಿಲ್ಲಾ ಪಂಚಾಯತ್	ಹಾವೇರಿ ನರ್ಸರಿ	ಕಾರ್ಯನಿರ್ವಹಿಸುತ್ತಿದೆ
12	ಮೈಸೂರು	ಕೊಡಗು	ಸೊಮವಾರಪೇಟೆ	ಜಿಲ್ಲಾ ಪಂಚಾಯತ್	ಸೊಮವಾರಪೇಟೆ ನರ್ಸರಿ	ಕಾರ್ಯನಿರ್ವಹಿಸುತ್ತಿದೆ
13	ಮೈಸೂರು	ಕೊಡಗು	ಮಡಿಕೇರಿ	ಜಿಲ್ಲಾ ಪಂಚಾಯತ್	ಮಡಿಕೇರಿ ನರ್ಸರಿ	ಕಾರ್ಯನಿರ್ವಹಿಸುತ್ತಿದೆ
14	ಮೈಸೂರು	ಕೊಡಗು	ಪೊನ್ನಂಪೇಟೆ	ಜಿಲ್ಲಾ ಪಂಚಾಯತ್	ಪೊನ್ನಂಪೇಟೆ ನರ್ಸರಿ	ಕಾರ್ಯನಿರ್ವಹಿಸುತ್ತಿದೆ
15	ಮೈಸೂರು	ಮೈಸೂರು	ಕೆ.ಆರ್.ನಗರ	ಜಿಲ್ಲಾ ಪಂಚಾಯತ್	ಕೆ.ಆರ್.ನಗರ ಮೀನುಮರಿ ಪಾಲನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ
16	ಮೈಸೂರು	ಮೈಸೂರು	ನಂಜನಗೂಡು	ಜಿಲ್ಲಾ ಪಂಚಾಯತ್	ನಂಜನಗೂಡು ಮೀನುಮರಿ ಪಾಲನಾ ಕೇಂದ್ರ	ಕಾರ್ಯನಿರ್ವಹಿಸುತ್ತಿದೆ
17	ಮೈಸೂರು	ಚಾಮರಾಜನಗರ	ಗುಂಡ್ಲುಪೇಟೆ	ಜಿಲ್ಲಾ ಪಂಚಾಯತ್	ಗುಂಡ್ಲುಪೇಟೆ ನರ್ಸರಿ	ಕಾರ್ಯನಿರ್ವಹಿಸುತ್ತಿದೆ
18	ಮೈಸೂರು	ಮಂಡ್ಯ	ಕೆ.ಆರ್.ಪೇಟೆ	ಜಿಲ್ಲಾ ಪಂಚಾಯತ್	ಹೇಮಗಿರಿ ನರ್ಸರಿ	ಕಾರ್ಯನಿರ್ವಹಿಸುತ್ತಿದೆ

19	ಮೈಸೂರು	ಮಂಡ್ಯ	ಪಾಂಡವಪುರ	ಜಿಲ್ಲಾ ಪಂಚಾಯತ್	ಪಾಂಡವಪುರ ನರ್ಸರಿ	ಕಾರ್ಯನಿರ್ವಹಿಸುತ್ತಿದೆ
20	ಮೈಸೂರು	ಮಂಡ್ಯ	ಮಳವಳ್ಳಿ	ಜಿಲ್ಲಾ ಪಂಚಾಯತ್	ಮಳವಳ್ಳಿ ನರ್ಸರಿ	ಕಾರ್ಯನಿರ್ವಹಿಸುತ್ತಿದೆ
21	ಮೈಸೂರು	ಹಾಸನ	ಬೇಲೂರು	ಜಿಲ್ಲಾ ಪಂಚಾಯತ್	ಬೇಲೂರು ನರ್ಸರಿ	ಕಾರ್ಯನಿರ್ವಹಿಸುತ್ತಿದೆ
22	ಮೈಸೂರು	ಹಾಸನ	ಸಕಲೇಶಪುರ	ಜಿಲ್ಲಾ ಪಂಚಾಯತ್	ಸಕಲೇಶಪುರ ನರ್ಸರಿ	ಕಾರ್ಯನಿರ್ವಹಿಸುತ್ತಿದೆ
23	ಮೈಸೂರು	ಹಾಸನ	ಚನ್ನರಾಯಪಟ್ಟಣ	ಜಿಲ್ಲಾ ಪಂಚಾಯತ್	ಚನ್ನರಾಯಪಟ್ಟಣ ನರ್ಸರಿ	ಕಾರ್ಯನಿರ್ವಹಿಸುತ್ತಿದೆ
24	ಶಿವಮೊಗ್ಗ	ಚಿಕ್ಕಮಗಳೂರು	ಕೊಪ್ಪ	ಜಿಲ್ಲಾ ಪಂಚಾಯತ್	ಕೊಪ್ಪ ನರ್ಸರಿ	ಕಾರ್ಯನಿರ್ವಹಿಸುತ್ತಿದೆ
25	ಶಿವಮೊಗ್ಗ	ಚಿಕ್ಕಮಗಳೂರು	ತರೀಕೆರೆ	ಜಿಲ್ಲಾ ಪಂಚಾಯತ್	ತರೀಕೆರೆ ನರ್ಸರಿ	ಕಾರ್ಯನಿರ್ವಹಿಸುತ್ತಿದೆ
26	ಶಿವಮೊಗ್ಗ	ಚಿಕ್ಕಮಗಳೂರು	ಶೃಂಗೇರಿ	ಜಿಲ್ಲಾ ಪಂಚಾಯತ್	ಶೃಂಗೇರಿ ನರ್ಸರಿ	ಕಾರ್ಯನಿರ್ವಹಿಸುತ್ತಿದೆ
27	ಶಿವಮೊಗ್ಗ	ಚಿಕ್ಕಮಗಳೂರು	ನರಸಿಂಹರಾಜಪುರ	ಜಿಲ್ಲಾ ಪಂಚಾಯತ್	ನರಸಿಂಹರಾಜಪುರ ನರ್ಸರಿ	ಕಾರ್ಯನಿರ್ವಹಿಸುತ್ತಿದೆ
28	ಶಿವಮೊಗ್ಗ	ಚಿಕ್ಕಮಗಳೂರು	ಮೂಡಿಗೆರೆ	ಜಿಲ್ಲಾ ಪಂಚಾಯತ್	ಮೂಡಿಗೆರೆ ನರ್ಸರಿ	ಕಾರ್ಯನಿರ್ವಹಿಸುತ್ತಿದೆ

29	ಶಿವಮೊಗ್ಗ	ದಾವಣಗೆರೆ	ಹರಪನಹಳ್ಳಿ	ಜಿಲ್ಲಾ ಪಂಚಾಯತ್	ಹರಪನಹಳ್ಳಿ ನರ್ಸರಿ	ಕಾರ್ಯನಿರ್ವಹಿಸುತ್ತಿದೆ
30	ಶಿವಮೊಗ್ಗ	ದಾವಣಗೆರೆ	ಹೊನ್ನಾಳಿ	ಜಿಲ್ಲಾ ಪಂಚಾಯತ್	ಹೊನ್ನಾಳಿ ನರ್ಸರಿ	ಕಾರ್ಯನಿರ್ವಹಿಸುತ್ತಿದೆ
31	ಶಿವಮೊಗ್ಗ	ದಾವಣಗೆರೆ	ಜಗಳೂರು	ಜಿಲ್ಲಾ ಪಂಚಾಯತ್	ಜಗಳೂರು ನರ್ಸರಿ	ಕಾರ್ಯನಿರ್ವಹಿಸುತ್ತಿದೆ
32	ಶಿವಮೊಗ್ಗ	ಶಿವಮೊಗ್ಗ	ಹೊಸನಗರ	ಜಿಲ್ಲಾ ಪಂಚಾಯತ್	ಹೊಸನಗರ ನರ್ಸರಿ	ಕಾರ್ಯನಿರ್ವಹಿಸುತ್ತಿದೆ
33	ಶಿವಮೊಗ್ಗ	ಶಿವಮೊಗ್ಗ	ತೀರ್ಥಹಳ್ಳಿ	ಜಿಲ್ಲಾ ಪಂಚಾಯತ್	ತೀರ್ಥಹಳ್ಳಿ ನರ್ಸರಿ	ಕಾರ್ಯನಿರ್ವಹಿಸುತ್ತಿದೆ
34	ಶಿವಮೊಗ್ಗ	ಶಿವಮೊಗ್ಗ	ಭದ್ರಾವತಿ	ಜಿಲ್ಲಾ ಪಂಚಾಯತ್	ಭದ್ರಾವತಿ ನರ್ಸರಿ	ಕಾರ್ಯನಿರ್ವಹಿಸುತ್ತಿದೆ
35	ಶಿವಮೊಗ್ಗ	ಶಿವಮೊಗ್ಗ	ಸೊರಬ	ಜಿಲ್ಲಾ ಪಂಚಾಯತ್	ಸೊರಬ ನರ್ಸರಿ	ಕಾರ್ಯನಿರ್ವಹಿಸುತ್ತಿದೆ
36	ಶಿವಮೊಗ್ಗ	ಚಿತ್ರದುರ್ಗ	ಹೊಸದುರ್ಗ	ಜಿಲ್ಲಾ ಪಂಚಾಯತ್	ಹೊಸದುರ್ಗ ನರ್ಸರಿ	ಕಾರ್ಯನಿರ್ವಹಿಸುತ್ತಿದೆ
37	ಶಿವಮೊಗ್ಗ	ಚಿತ್ರದುರ್ಗ	ಹಿರಿಯೂರು	ಜಿಲ್ಲಾ ಪಂಚಾಯತ್	ಹಿರಿಯೂರು ನರ್ಸರಿ	ಕಾರ್ಯನಿರ್ವಹಿಸುತ್ತಿದೆ
38	ಶಿವಮೊಗ್ಗ	ಚಿತ್ರದುರ್ಗ	ಚಿತ್ರದುರ್ಗ	ಜಿಲ್ಲಾ ಪಂಚಾಯತ್	ತಿಮ್ಮಣ್ಣನಾಯ್ಕ ನರ್ಸರಿ	ಕಾರ್ಯನಿರ್ವಹಿಸುತ್ತಿದೆ

39	ಕಾರವಾರ	ಉತ್ತರಕನ್ನಡ	ಯಲ್ಲಾಪುರ	ಜಿಲ್ಲಾ ಪಂಚಾಯತ್	ಯಲ್ಲಾಪುರ ನರ್ಸರಿ	ಕಾರ್ಯನಿರ್ವಹಿಸುತ್ತಿದೆ
40	ಕಾರವಾರ	ಉತ್ತರಕನ್ನಡ	ಶಿರಸಿ	ಜಿಲ್ಲಾ ಪಂಚಾಯತ್	ಶಿರಸಿ ನರ್ಸರಿ	ಕಾರ್ಯನಿರ್ವಹಿಸುತ್ತಿದೆ
41	ಮೈಸೂರು	ಮೈಸೂರು	ಪಿರಿಯಾಪಟ್ಟಣ	ರಾಜ್ಯವಲಯ	ಪಿರಿಯಾಪಟ್ಟಣನರ್ಸರಿ	ಕಾರ್ಯನಿರ್ವಹಿಸುತ್ತಿಲ್ಲ.
42	ಬೆಂಗಳೂರು	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ರಾಜ್ಯವಲಯ	ಭದ್ರನಕೆರೆ ನರ್ಸರಿ	ಕಾರ್ಯನಿರ್ವಹಿಸುತ್ತಿಲ್ಲ.
43	ಬೆಂಗಳೂರು	ಬೆಂಗಳೂರು ಗ್ರಾಮಾಂತರ	ನೆಲಮಂಗಲ	ಜಿಲ್ಲಾ ಪಂಚಾಯತ್	ನೆಲಮಂಗಲ ನರ್ಸರಿ	ಕಾರ್ಯನಿರ್ವಹಿಸುತ್ತಿಲ್ಲ.
44	ಬೆಂಗಳೂರು	ತುಮಕೂರು	ಪಾವಗಡ	ಜಿಲ್ಲಾ ಪಂಚಾಯತ್	ಪಾವಗಡ ನರ್ಸರಿ	ಕಾರ್ಯನಿರ್ವಹಿಸುತ್ತಿಲ್ಲ.
45	ಬೆಂಗಳೂರು	ಕೋಲಾರ	ಮುಳುಬಾಗಿಲು	ಜಿಲ್ಲಾ ಪಂಚಾಯತ್	ಮುಳುಬಾಗಿಲು ನರ್ಸರಿ	ಕಾರ್ಯನಿರ್ವಹಿಸುತ್ತಿಲ್ಲ.
46	ಬೆಳಗಾವಿ	ಹಾವೇರಿ	ರಾಣೆಬೆನ್ನೂರು	ಜಿಲ್ಲಾ ಪಂಚಾಯತ್	ರಾಣೆಬೆನ್ನೂರು ನರ್ಸರಿ	ಕಾರ್ಯನಿರ್ವಹಿಸುತ್ತಿಲ್ಲ.
47	ಬಳ್ಳಾರಿ	ಬೀದರ್	ಬೀದರ್	ಜಿಲ್ಲಾ ಪಂಚಾಯತ್	ಬೀದರ್ ನರ್ಸರಿ	ಕಾರ್ಯನಿರ್ವಹಿಸುತ್ತಿಲ್ಲ.
48	ಬಳ್ಳಾರಿ	ರಾಯಚೂರು	ರಾಯಚೂರು	ಜಿಲ್ಲಾ ಪಂಚಾಯತ್	ರಾಯಚೂರು ನರ್ಸರಿ	ಕಾರ್ಯನಿರ್ವಹಿಸುತ್ತಿಲ್ಲ.

49	ಬಳ್ಳಾರಿ	ರಾಯಚೂರು	ಲಿಂಗಸುಗೂರು	ಜಿಲ್ಲಾ ಪಂಚಾಯತ್	ಲಿಂಗಸುಗೂರು ನರ್ಸರಿ	ಕಾರ್ಯನಿರ್ವಹಿಸುತ್ತಿಲ್ಲ.
50	ಮೈಸೂರು	ಹಾಸನ	ಅರಸೀಕೆರೆ	ಜಿಲ್ಲಾ ಪಂಚಾಯತ್	ಅರಸೀಕೆರೆ ನರ್ಸರಿ	ಕಾರ್ಯನಿರ್ವಹಿಸುತ್ತಿಲ್ಲ.
51	ಶಿವಮೊಗ್ಗ	ಚಿತ್ರದುರ್ಗ	ಮೊಳಕಾಲ್ಮೂರು	ಜಿಲ್ಲಾ ಪಂಚಾಯತ್	ಮೊಳಕಾಲ್ಮೂರು ನರ್ಸರಿ	ಕಾರ್ಯನಿರ್ವಹಿಸುತ್ತಿಲ್ಲ.
52	ಶಿವಮೊಗ್ಗ	ಚಿತ್ರದುರ್ಗ	ಹೊಳಲ್ಕೆರೆ	ಜಿಲ್ಲಾ ಪಂಚಾಯತ್	ಹೊಳಲ್ಕೆರೆ ನರ್ಸರಿ	ಕಾರ್ಯನಿರ್ವಹಿಸುತ್ತಿಲ್ಲ.
53	ಶಿವಮೊಗ್ಗ	ಶಿವಮೊಗ್ಗ	ಸಾಗರ	ಜಿಲ್ಲಾ ಪಂಚಾಯತ್	ಸಾಗರ ನರ್ಸರಿ	ಕಾರ್ಯನಿರ್ವಹಿಸುತ್ತಿಲ್ಲ.
54	ಮೈಸೂರು	ಮೈಸೂರು	ಟಿ.ನರಸೀಪುರ	ಜಿಲ್ಲಾ ಪಂಚಾಯತ್	ಟಿ.ನರಸೀಪುರ ನರ್ಸರಿ	ಕಾರ್ಯನಿರ್ವಹಿಸುತ್ತಿಲ್ಲ.
55	ಮೈಸೂರು	ಮೈಸೂರು	ಮೈಸೂರು	ಜಿಲ್ಲಾ ಪಂಚಾಯತ್	ಮೈಸೂರು ನರ್ಸರಿ	ಕಾರ್ಯನಿರ್ವಹಿಸುತ್ತಿಲ್ಲ.
56	ಬಳ್ಳಾರಿ	ಕೊಪ್ಪಳ	ಗಂಗಾವತಿ	ಜಿಲ್ಲಾ ಪಂಚಾಯತ್	ಗಂಗಾವತಿ ನರ್ಸರಿ	ಕಾರ್ಯನಿರ್ವಹಿಸುತ್ತಿಲ್ಲ.
57	ಬಳ್ಳಾರಿ	ಕಲಬುರಗಿ	ಕಲಬುರಗಿ	ಜಿಲ್ಲಾ ಪಂಚಾಯತ್	ಚಂದ್ರಂಪಲ್ಲಿ ನರ್ಸರಿ	ಕಾರ್ಯನಿರ್ವಹಿಸುತ್ತಿಲ್ಲ.
58	ಬಳ್ಳಾರಿ	ಬಿದರ್	ಸಂತಪುರ	ಜಿಲ್ಲಾ ಪಂಚಾಯತ್	ಸಂತಪುರ ನರ್ಸರಿ	ಕಾರ್ಯನಿರ್ವಹಿಸುತ್ತಿಲ್ಲ.

59	ಬಳ್ಳಾರಿ	ಬಿದರ್	ಬಸವಕಲ್ಯಾಣ	ಜಿಲ್ಲಾ ಪಂಚಾಯತ್	ಬಸವಕಲ್ಯಾಣ ನರ್ಸರಿ	ಕಾರ್ಯನಿರ್ವಹಿಸುತ್ತಿಲ್ಲ.
60	ಬೆಳಗಾವಿ	ಬೆಳಗಾವಿ	ರಾಯಭಾಗ	ಜಿಲ್ಲಾ ಪಂಚಾಯತ್	ರಾಯಭಾಗ ನರ್ಸರಿ	ಕಾರ್ಯನಿರ್ವಹಿಸುತ್ತಿಲ್ಲ.

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 413ರ

ಅನುಬಂಧ-3

ಮಂಡ್ಯ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೀನುಮರಿ ಸಾಕಾಣಿಕೆ ಮತ್ತು ವಿತರಣಾ ಕೇಂದ್ರಗಳ ವಿವರ

ಕ್ರ.ಸಂ.	ತಾಲ್ಲೂಕು	ಕೇಂದ್ರದ ಹೆಸರು
1	ಕೆ.ಆರ್.ಪೇಟೆ	ಹೇಮಗಿರಿ ಮೀನುಮರಿ ಪಾಲನಾ ಕೇಂದ್ರ
2	ಮದ್ದೂರು	ಮದ್ದೂರು ಮೀನುಮರಿ ಪಾಲನಾ ಕೇಂದ್ರ
3	ಮಂಡ್ಯ	ಗೋಪಾಲಪುರ ಮೀನುಮರಿ ಪಾಲನಾ ಕೇಂದ್ರ
4	ಮಂಡ್ಯ	ಬೂದನೂರು ಮೀನುಮರಿ ಉತ್ಪಾದನಾ/ಪಾಲನಾ ಕೇಂದ್ರ
5	ಮಳವಳ್ಳಿ	ಮಳವಳ್ಳಿ ಮೀನುಮರಿ ಪಾಲನಾ ಕೇಂದ್ರ
6	ನಾಗಮಂಗಲ	ನಾಗಮಂಗಲ ಮೀನುಮರಿ ಪಾಲನಾ ಕೇಂದ್ರ
7	ಪಾಂಡವಪುರ	ಪಾಂಡವಪುರ ಮೀನುಮರಿ ಪಾಲನಾ ಕೇಂದ್ರ
8	ಶ್ರೀರಂಗಪಟ್ಟಣ	ಕೆ.ಆರ್.ಸಾಗರ ಮೀನುಮರಿ ಪಾಲನಾ ಕೇಂದ್ರ

[illegible] (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) [illegible]

ಪ್ರಶ್ನೆ ಸಂಖ್ಯೆ: 4138 ಅನುಬಂಧ-4

ಮೀನುಗಾರಿಕೆ ಇಲಾಖೆಯಲ್ಲಿ ವಿವಿಧ ಯೋಜನೆಯಡಿ ಕಳೆದ 3 ವರ್ಷಗಳಲ್ಲಿ ಮಂಜೂರಾದ ಕಾಮಗಾರಿಗಳ ವಿವರ (ರೂ. ಲಕ್ಷಗಳಲ್ಲಿ)

ಕ್ರ. ಸಂ.	ತಾಲ್ಲೂಕು	ಮಂಜೂರಾದ ಕಾಮಗಾರಿಗಳು	ಅಂದಾಜು ಮೊತ್ತ	ಬಿಡುಗಡೆ ಯಾದ ಅನುದಾನ	ಪೂರ್ಣಗೊಂಡ ಕಾಮಗಾರಿಗಳು	ಪ್ರಗತಿಯಲ್ಲಿರುವ ಕಾಮಗಾರಿಗಳು	ಪ್ರಾರಂಭವಾಗದ ಕಾಮಗಾರಿಗಳು
		ಅವಧಿ 2018-19					
1	ಉಡುಪಿ	Extension of Jetty near Bobbarya pade in Udupi taluk and district	130.00	1.20	-	-	ಪ್ರಾರಂಭಿಸಬೇಕಿದೆ
2	ಮಂಡ್ಯ	Restoration and construction of Fish Seed ponds in Gopalapura Fish Farm in Mandya	91.00	0.00	-	-	ಪ್ರಾರಂಭಿಸಬೇಕಿದೆ
3	ಸರಗೂರು	Conversion of 15 Earthen Ponds to Masonry Ponds in Nugu Fish Farm	188.00	188.00	-	ಪ್ರಗತಿಯಲ್ಲಿದೆ	-
4	ಹೆಚ್. ಡಿ. ಕೋಟೆ	Conversion of 10 Earthen Ponds to Masonry Ponds in Kabini Fish Farm at H.D. Kote taluk	189.50	189.50	-	ಪ್ರಗತಿಯಲ್ಲಿದೆ	-
5	ಕೊಪ್ಪಳ	Construction of RCC Lining to fish ponds, fencing, main water supply and hatchery construction Road and Drainage works to Shivapura fish farm in Koppal taluk and district.	340.00	340.00	-	ಪ್ರಗತಿಯಲ್ಲಿದೆ	-
6	ಸೋಮವಾರಪೇಟೆ	Restoration of Existing Fish ponds in Harangi fish Farm at Somwarpet taluk	200.00	200.00	ಪೂರ್ಣಗೊಂಡಿದೆ	-	-
7	ಚಿಕ್ಕಮಗಳೂರು	Construction of RCC Lining to Earthern ponds No.s 01 to 12 @ Menasinhally fish farm in Tarikere taluk	100.00	100.00	-	ಪ್ರಗತಿಯಲ್ಲಿದೆ	-

ಕ್ರ. ಸಂ.	ತಾಲ್ಲೂಕು	ಮಂಜೂರಾದ ಕಾಮಗಾರಿಗಳು	ಅಂದಾಜು ಮೊತ್ತ	ಬಿಡುಗಡೆ ಯಾದ ಅನುದಾನ	ಪೂರ್ಣಗೊಂಡ ಕಾಮಗಾರಿಗಳು	ಪ್ರಗತಿಯಲ್ಲಿರುವ ಕಾಮಗಾರಿಗಳು	ಪ್ರಾರಂಭವಾಗದ ಕಾಮಗಾರಿಗಳು
8	ವಿಜಯಪುರ	Construction of RCC Lining to Breeding Ponds, RCC Drainage works to Narayanapura fish Farm at Muddebihal taluk Bijapur	300.00	300.00	-	ಪ್ರಾರಂಭಿಸಬೇಕಿದೆ	-
9	ಭದ್ರಾವತಿ	Development work of Fish Farm at B.R. Project in Bhadravathi taluk	100.00	100.00	ಪೂರ್ಣಗೊಂಡಿದೆ	-	-
10	ವಿಜಯಪುರ	Construction of Hygenic Fish Market at Indi	100.00	100.00	-	ಪ್ರಗತಿಯಲ್ಲಿದೆ	-
11	ಉಡುಪಿ	Construction of Hygenic Fish Market at Udupi	100.00	100.00	-	-	ಪ್ರಾರಂಭಿಸಬೇಕಿದೆ
12	ಬಳ್ಳಾರಿ	Construction of Hygenic Fish Market at Siruguppa	100.00	100.00	-	ಪ್ರಗತಿಯಲ್ಲಿದೆ	-
13	ಸಿಂಧನೂರು	Construction of Hygenic Fish Market at Sindhanur	100.00	100.00	-	ಪ್ರಗತಿಯಲ್ಲಿದೆ	-
14	ಯಾದಗಿರಿ	Construction of Hygenic Fish Market at Yadagiri	100.00	100.00	-	ಪ್ರಗತಿಯಲ್ಲಿದೆ	-
15	ಮಂಗಳೂರು	Construction of Naadadoni thangudana for landing of Traditional fishing boats in thota bengre of Mangalore taluk	337.00	2.00	-	-	ಪ್ರಾರಂಭಿಸಬೇಕಿದೆ
16	ಉಡುಪಿ	Construction of Auction Hall at Hangarkatte Udupi taluk	101.00	6.98	ಪೂರ್ಣಗೊಂಡಿದೆ	-	-
17	ಚಿಕ್ಕಮಗಳೂರು	Upgradation of Fish Farm at Menasinhally of tarikere taluk, chikkamaglur district	134	134.00	-	ಪ್ರಗತಿಯಲ್ಲಿದೆ	-
18	ಬಂಗಾರುಪೇಟೆ	Upgradation of Fish Farm at Markandaiah fish farm Bangarpet taluk Kolar district	127	127.00	-	ಪ್ರಗತಿಯಲ್ಲಿದೆ	-

ಕ್ರ. ಸಂ.	ತಾಲ್ಲೂಕು	ಮಂಜೂರಾದ ಕಾಮಗಾರಿಗಳು	ಅಂದಾಜು ಮೊತ್ತ	ಬಿಡುಗಡೆ ಯಾದ ಅನುದಾನ	ಪೂರ್ಣಗೊಂಡ ಕಾಮಗಾರಿಗಳು	ಪ್ರಗತಿಯಲ್ಲಿರುವ ಕಾಮಗಾರಿಗಳು	ಪ್ರಾರಂಭವಾಗದ ಕಾಮಗಾರಿಗಳು
19	ಉಡುಪಿ	Conducting Bathymetric survey in sea from estuay for construction of Fishery jetty at Kodibengre Hangarkatte in Udupi Taluk	4.95	4.95	ಪೂರ್ಣಗೊಂಡಿದೆ	-	-
20	ಕುಂದಾಪುರ	Conducting Bathymetric survey in sea from estuay for construction of Fishery Harbour at Koderi, Kundapur Taluk in Udupi District	4.95	4.95	ಪೂರ್ಣಗೊಂಡಿದೆ	-	-
21	ಕುಂದಾಪುರ	Conducting Bathymetric survey in sea from estuay for construction of Fishery Harbour at Maravanthe, Kundapur Taluk in Udupi District	4.95	4.95	ಪೂರ್ಣಗೊಂಡಿದೆ	-	-
22	ಕುಂದಾಪುರ	Conducting Bathymetric survey in sea from estuay for Development of Fishery Harbour at Hejamadi Kodi	4.95	4.95	ಪೂರ್ಣಗೊಂಡಿದೆ	-	-
23	ಮಂಗಳೂರು	ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ಮೂಲ್ಕಿ ಮುಂಡ ಸಸಿಹಿತ್ಲು ಎಂಬಲ್ಲಿ ಮೀನುಗಾರಿಕಾ ಜೆಟ್ಟಿ ಕಾಮಗಾರಿಯಲ್ಲಿ ಬರುವ ನೆಟ್ ಮೆಂಡಿಂಗ್ ಶೆಡ್ಡ್ ವಿದ್ಯುದ್ದೀಕರಣ.	1.50	1.50	ಪೂರ್ಣಗೊಂಡಿದೆ	-	-
24	ಉಡುಪಿ	ಉಡುಪಿ ತಾಲೂಕು ಕೋಡಿಕನ್ಯಾನ ಮೀನುಗಾರಿಕಾ ಜೆಟ್ಟಿ ವಿಸ್ತರಣೆಗಾಗಿ ಮಣ್ಣಿನ ಪರೀಕ್ಷೆಗಳನ್ನು ಕೈಗೊಳ್ಳಲು ಬೋರ್ ಹೋಲ್ ತೆಗೆಯುವ ಕಾಮಗಾರಿ	1.97	1.97	ಪೂರ್ಣಗೊಂಡಿದೆ	-	-

ಕ್ರ. ಸಂ.	ತಾಲ್ಲೂಕು	ಮಂಜೂರಾದ ಕಾಮಗಾರಿಗಳು	ಅಂದಾಜು ಮೊತ್ತ	ಬಿಡುಗಡೆ ಯಾದ ಅನುದಾನ	ಪೂರ್ಣಗೊಂಡ ಕಾಮಗಾರಿಗಳು	ಪ್ರಗತಿಯಲ್ಲಿರುವ ಕಾಮಗಾರಿಗಳು	ಪ್ರಾರಂಭವಾಗದ ಕಾಮಗಾರಿಗಳು
25	ಉಡುಪಿ	ಉಡುಪಿ ತಾಲೂಕು ಕೋಡಿಬೆಂಗ್ರೆ ಮೀನುಗಾರಿಕಾ ಜಟ್ಟಿ ವಿಸ್ತರಣೆಗಾಗಿ ಮಣ್ಣಿನ ಪರೀಕ್ಷೆಗಳನ್ನು ಕೈಗೊಳ್ಳಲು ಬೋರ್ ಹೋಲ್ ತೆಗೆಯುವ ಕಾಮಗಾರಿ	1.99	1.99	ಪೂರ್ಣಗೊಂಡಿದೆ	-	-
26	ಉತ್ತರ ಕನ್ನಡ	ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಅಘನಾಶಿನಿಯಲ್ಲಿ ಜಗದೀಶ ಲಕ್ಕುಮನೆ ಅಂಗಡಿ ಹತ್ತಿರ ಮೀನುಗಾರಿಕಾ ರ್‍ಯಾಂಪ್ ಮತ್ತು ಪ್ಲಾಟ್ಫಾರ್ಮ ನಿರ್ಮಾಣ ಕಾಮಗಾರಿ.	50.00	50.00	-	ಪ್ರಗತಿಯಲ್ಲಿದೆ	-
27	ಉತ್ತರ ಕನ್ನಡ	ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ತದಡಿ ಮೀನುಗಾರಿಕೆ ಬಂದರಿನಲ್ಲಿ ಹೊಸದಾಗಿ ಹೈ ಮಾಸ್ಟ್ ದೀಪ ಅಳವಡಿಸುವುದು.	30.00	25.00	ಪೂರ್ಣಗೊಂಡಿದೆ	-	-

ಕ್ರ. ಸಂ.	ತಾಲ್ಲೂಕು	ಮಂಜೂರಾದ ಕಾಮಗಾರಿಗಳು	ಅಂದಾಜು ಮೊತ್ತ	ಬಿಡುಗಡೆ ಯಾದ ಅನುದಾನ	ಪೂರ್ಣಗೊಂಡ ಕಾಮಗಾರಿಗಳು	ಪ್ರಗತಿಯಲ್ಲಿರುವ ಕಾಮಗಾರಿಗಳು	ಪ್ರಾರಂಭವಾಗದ ಕಾಮಗಾರಿಗಳು
28	ಕುಮಟಾ	ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ತದಡಿ ಮೀನುಗಾರಿಕೆ ಬಂದರಿನಲ್ಲಿ ಶೌಚಾಲಯ ಮತ್ತು ಸ್ನಾನಗೃಹ ನಿರ್ಮಿಸುವುದು, ತದಡಿ ಮೀನುಗಾರಿಕೆ ಸಹಾಯಕ ನಿರ್ದೇಶಕರು, (ಶ್ರೇಣಿ-1) ರವರ ಕಛೇರಿಯ ಗ್ರೂಪ್‌ರ್ "ಬಿ" ವಸತಿ ಗೃಹದ ದುರಸ್ತಿ ಕಾಮಗಾರಿ, ತದಡಿ ಮೀನುಗಾರಿಕೆ ಸಹಾಯಕ ನಿರ್ದೇಶಕರು, (ಶ್ರೇಣಿ-1) ರವರ ಕಛೇರಿಯ ಗ್ರೂಪ್‌ರ್ "ಸಿ" ವಸತಿ ಗೃಹದ ದುರಸ್ತಿ ಕಾಮಗಾರಿ, ತದಡಿ ಮೀನುಗಾರಿಕೆ ಸಹಾಯಕ ನಿರ್ದೇಶಕರು, (ಶ್ರೇಣಿ-1) ರವರ ವಸತಿ ಗೃಹದ ದುರಸ್ತಿ ಕಾಮಗಾರಿ.	44.00	44.00	ಪೂರ್ಣಗೊಂಡಿದೆ	-	-
29	ಕುಮಟಾ	ತದಡಿ ಮಿನುಗಾರಿಕೆ ಬಂದರಿನ ದುರಸ್ತಿ ಕೆಲಸಗಳು.	105.00	0.00	ಪೂರ್ಣಗೊಂಡಿದೆ	-	-
30	ಕುಮಟಾ	ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ತದಡಿ ಮೀನುಗಾರಿಕೆ ಬಂದರಿನಲ್ಲಿ ಇರುವ ಬೋಲಾರ್ಡಗಳಿಗೆ ಟಾಯರ ಫೆಂಡರಗಳನ್ನು ಅಳವಡಿಸುವ ಕಾಮಗಾರಿ	2.75	2.06	ಪೂರ್ಣಗೊಂಡಿದೆ	-	-
31	ಮಂಡ್ಯ	ಗೋಪಾಲಪುರ ಮೀನುಮರಿ ಪಾಲನಾ ಕೇಂದ್ರದ ಮಣ್ಣಿನ ಕೊಳಗಳ ಹೂಳೆತ್ತುವ ಕಾಮಗಾರಿ	3.50	3.50	ಪೂರ್ಣಗೊಂಡಿದೆ	-	-

ಕ್ರ. ಸಂ.	ತಾಲ್ಲೂಕು	ಮಂಜೂರಾದ ಕಾಮಗಾರಿಗಳು	ಅಂದಾಜು ಮೊತ್ತ	ಬಿಡುಗಡೆ ಯಾದ ಅನುದಾನ	ಪೂರ್ಣಗೊಂಡ ಕಾಮಗಾರಿಗಳು	ಪ್ರಗತಿಯಲ್ಲಿರುವ ಕಾಮಗಾರಿಗಳು	ಪ್ರಾರಂಭವಾಗದ ಕಾಮಗಾರಿಗಳು
32	ಮಂಡ್ಯ	ಗೋಪಾಲಪುರ ಮೀನುಮರಿ ಪಾಲನಾ ಕೇಂದ್ರದ ಕೊಳ & ಒಳ ಚರಂಡಿ, ದುರಸ್ತಿ,	3.00	3.00	ಪೂರ್ಣಗೊಂಡಿದೆ	-	-
33	ರಾಮನಗರ	ನಲ್ಲಿಗುಡ್ಡ ಫಿಶ್ ಫಾರಂನಲ್ಲಿ 03 ಕೊಳಗಳ ಹಾಗೂ ಕಟ್ಟಡಗಳ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.	7.00	7.00	ಪೂರ್ಣಗೊಂಡಿದೆ	-	-
34	ಕಾರವಾಖ	ಮೀನುಗಾರಿಕೆ ಬಂದರಿನ ಜಟ್ಟಿಯನ್ನು ಪಶ್ಚಿಮ ಭಾಗದಲ್ಲಿ ಹಾಳಾಗಿರುವ ಕಾಂಕ್ರಿಟ್ ಕಾಮಗಾರಿ ವೆಚ್ಚ	0.8	0.80	ಪೂರ್ಣಗೊಂಡಿದೆ	-	-
35	ಕಾರವಾರ	ಮೀನುಗಾರಿಕೆ ಬಂದರಿನ ಸಿ.ಸಿ ಟಿವಿ ಅಳವಡಿಕೆ ಕಾಮಗಾರಿ	0.90	0.90	ಪೂರ್ಣಗೊಂಡಿದೆ	-	-
36	ಕಾರವಾರ	ಕಾರವಾರ ಮೀನುಗಾರಿಕೆ ಬಂದರಿನ ಸಿ.ಸಿ.ಟಿವಿ ಕ್ಯಾಮರಾಗೆ ಅಗತ್ಯವಿರುವ ಇನ್ ವಟರ್ ಬ್ಯಾಟರಿ ಅಳವಡಿಕೆ	0.35	0.35	ಪೂರ್ಣಗೊಂಡಿದೆ	-	-
37	ಕಾರವಾರ	ಅಮದಳ್ಳಿ ಮೀನುಗಾರಿಕೆ ಬಂದರಿನಲ್ಲಿ ಕುಡಿಯುವ ನೀರಿನ ಪೈಪ್ ಲೈನ್ ದುರಸ್ತಿ ಕಾಮಗಾರಿಯ ಬಾಬ್ತು	0.73	0.73	ಪೂರ್ಣಗೊಂಡಿದೆ	-	-
38	ಕಾರವಾರ	ಅಮದಳ್ಳಿ ಮೀನುಗಾರಿಕೆ ಬಂದರಿನಲ್ಲಿ ಕುಡಿಯುವ ನೀರಿನ ಪೈಪ್ ಲೈನ್ ದುರಸ್ತಿ ಕಾಮಗಾರಿಯ ಬಾಬ್ತು	0.73	0.73	ಪೂರ್ಣಗೊಂಡಿದೆ	-	-
39	ಕಾರವಾರ	ಅಮದಳ್ಳಿ ಮೀನುಗಾರಿಕೆ ಬಂದರಿಗೆ ನೀರಿನ ಸೌಲಭ್ಯ ವದಗಿಸುವ ಪೈಪ್ ಲೈನ್ ರಿಪೇರಿ ಕಾಮಗಾರಿ	4.69	4.69	ಪೂರ್ಣಗೊಂಡಿದೆ	-	-
40	ಕಾರವಾರ	ಅಮದಳ್ಳಿ ಮೀನುಗಾರಿಕೆ ಬಂದರಿಗೆ ಉತ್ತಮ ಗುಣಮಟ್ಟದ ಸಿ.ಸಿ ಕ್ಯಾಮರಾ ಅಳವಡಿಸಿದ ವೆಚ್ಚ	0.92	0.92	ಪೂರ್ಣಗೊಂಡಿದೆ	-	-

ಕ್ರ. ಸಂ.	ತಾಲ್ಲೂಕು	ಮಂಜೂರಾದ ಕಾಮಗಾರಿಗಳು	ಅಂದಾಜು ಮೊತ್ತ	ಬಿಡುಗಡೆ ಯಾದ ಅನುದಾನ	ಪೂರ್ಣಗೊಂಡ ಕಾಮಗಾರಿಗಳು	ಪ್ರಗತಿಯಲ್ಲಿರುವ ಕಾಮಗಾರಿಗಳು	ಪ್ರಾರಂಭವಾಗದ ಕಾಮಗಾರಿಗಳು
41	ಕಾರವಾರ	ಅಮದಳ್ಳಿ ಮೀನುಗಾರಿಕೆ ಬಂದರಿಗೆ ನೀರಿನ ಸೌಲಭ್ಯ ಒದಗಿಸಲು ಪೈಪ್ ಲೈನ್ ರಿಪೇರಿ ಕಾಮಗಾರಿ	4.61	4.61	ಪೂರ್ಣಗೊಂಡಿದೆ	-	-
42	ಕಾರವಾರ	ಅಮದಳ್ಳಿ ಮೀನುಗಾರಿಕೆ ಬಂದರಿನಲ್ಲಿ ಹೊಸದಾಗಿ ಅಳವಡಿಸುವ ಒವರ್ ಹೆಡ್ ಟ್ಯಾಂಕ್‌ನಿಂದ ಮೀನುಗಾರಿಕೆ ದೋಣಿಗಳಿಗೆ ನೀರು ಪೂರೈಸಲು ಹರಾಜು ಕಟ್ಟೆಗೆ ಹೊಸದಾಗಿ ಪೈಪ್ ಲೈನ್ ಕಾಂಕ್ರಿಟ್ ರಸ್ತೆ ಅಗೆದು ಸರಿಪಡಿಸುವುದರೊಂದಿಗೆ	0.93	0.93	ಪೂರ್ಣಗೊಂಡಿದೆ	-	-
43	ಕಾರವಾರ	ಅಮದಳ್ಳಿ ಮೀನುಗಾರಿಕೆ ಬಂದರಿನಲ್ಲಿರುವ ಅಂಡರ್ ಗ್ರೌಂಡ್ ನೀರಿನ ಪಂಪನ್ನು ಸ್ವಚ್ಛಗೊಳಿಸಿ ಹಾಳಾದ ಸಬ್ ಮರ್ಸಿಬಲ್ ಪಂಪ್ ದುರಸ್ತಿಮಾಡಿಸಿ ನೀರು ಸರಬರಾಜಿನ ಪೈಪ್ ಅಳವಡಿಸುವ ಕಾಮಗಾರಿ	0.99	0.99	ಪೂರ್ಣಗೊಂಡಿದೆ	-	-
44	ಕಾರವಾರ	ಅಮದಳ್ಳಿ ಮೀನುಗಾರಿಕೆ ಬಂದರಿನಲ್ಲಿರುವ ಅಂಡರ್ ಗ್ರೌಂಡ್ ನೀರಿನ ಪಂಪ್ ನಿಂದ ಕೋಣೆತನಕ ವಿದ್ಯುತ್ ಕೇಬಲ್ ಅಳವಡಿಸಿ ಹೊಸದಾಗಿ ಪೆನಲ್ ಬೋರ್ಡ್ ಅಳವಡಿಸಿ ಗೇಟ ವಾಲ್ವ್ ಅಳವಡಿಸುವ ಕಾಮಗಾರಿ	0.99	0.99	ಪೂರ್ಣಗೊಂಡಿದೆ	-	-
45	ಕುಮಟಾ	ತದಡಿ ಮೀನುಗಾರಿಕೆ ಬಂದರಿನ ಆವರಣದ ಪಶ್ಚಿಮ ಬಾಗ ಕಂಪೌಂಡ ಗೋಡೆ ನಿರ್ಮಾಣ (30 ಮೀಟರ್)	1.00	1.00	ಪೂರ್ಣಗೊಂಡಿದೆ	-	-
46	ಕುಮಟಾ	ತದಡಿ ಮೀನುಗಾರಿಕೆ ಬಂದರಿನ ಆವರಣದ ಪಶ್ಚಿಮ ಬಾಗ ಕಂಪೌಂಡ ಗೋಡೆ ನಿರ್ಮಾಣ (30 ಮೀಟರ್)	1.00	1.00	ಪೂರ್ಣಗೊಂಡಿದೆ	-	-

ಕ್ರ. ಸಂ.	ತಾಲ್ಲೂಕು	ಮಂಜೂರಾದ ಕಾಮಗಾರಿಗಳು	ಅಂದಾಜು ಮೊತ್ತ	ಬಿಡುಗಡೆ ಯಾದ ಅನುದಾನ	ಪೂರ್ಣಗೊಂಡ ಕಾಮಗಾರಿಗಳು	ಪ್ರಗತಿಯಲ್ಲಿರುವ ಕಾಮಗಾರಿಗಳು	ಪ್ರಾರಂಭವಾಗದ ಕಾಮಗಾರಿಗಳು
47	ಕುಮಟಾ	ತದಡಿ ಬಂದರಿನ ಬಲೆ ಆಗರದ 09 ಕೋಣೆಗಳಿಗೆ ಪೈಬರ್ ಡೋರ್ ಅಳವಡಿಸಿದ ಕಾಮಗಾರಿ	0.95	0.95	ಪೂರ್ಣಗೊಂಡಿದೆ	-	-
48	ಕುಮಟಾ	ತದಡಿ ಬಂದರಿಗೆ ಹೆಚ್ಚುವರಿಯಾಗಿ ಅಳವಡಿಸಿದ 04-ಸಿ.ಸಿ.ಟಿ.ವಿ ಕ್ಯಾಮೆರಾ ಹಾಗೂ 1510 ಮೀಟರ್ ಇನ್ಸುಲೇಟೆಡದ ಕೇಬಲ್ ಹಾಗೂ ವಿಡಿಯೋ ಬಲೂನ್ ಅಳವಡಿಸಿದ ವೆಚ್ಚ .	0.57	0.57	ಪೂರ್ಣಗೊಂಡಿದೆ	-	-
49	ಕುಮಟಾ	ತದಡಿ ಬಂದರಿನ ಜೆಟ್ಟಿಯಲ್ಲಿ ಟೈರ್ ಫೆಂಡರ್ಸ್ ಅಳವಡಿಕೆ	2.06	2.06	ಪೂರ್ಣಗೊಂಡಿದೆ	-	-
50	ಕುಮಟಾ	ತದಡಿ ಬಂದರಿನ ಆಕ್ಷನ್ ಹಾಲಿನ ವಯರಿಂಗ್ ಹಾಗೂ ಹೊಸದಾಗಿ ಹೈಮಾಸ್ಟ ದೀಪ ಅಳವಡಿಕೆ ಕಾಮಗಾರಿ	0.96	0.96	ಪೂರ್ಣಗೊಂಡಿದೆ	-	-
51	ಅಂಕೋಲಾ	ಮಾವಿನಕುರ್ವೆ ಮೀನುಗಾರಿಕೆ ಬಂದರಿನ ಸಾರ್ವಜನಿಕ ಬಾವಿಯನ್ನು ಸ್ವಚ್ಛಗೊಳಿಸಿ ಪೈಪ್‌ಲೈನ್ ಅಳವಡಿಸುವ ಕಾಮಗಾರಿ ಸಾರ್ವಜನಿಕ ಶೌಚಾಲಯಕ್ಕೆ ಸಂಪರ್ಕ ಕಲ್ಪಿಸುವ ಕಾಮಗಾರಿ	0.52	0.52	ಪೂರ್ಣಗೊಂಡಿದೆ	-	-
52	ಅಂಕೋಲಾ	ಮಾವಿನಕುರ್ವೆ ಬಂದರಿನ ಸಾರ್ವಜನಿಕ ಶೌಚಾಲಯ ಕೊಠಡಿಗಳ ಸ್ವಚ್ಛತೆ ಪೈಬರ್‌ಗ್ಲಾಸ ಬಾಗಿಲು ಅಳವಡಿಸುವ ಕಾಮಗಾರಿ	0.99	0.99	ಪೂರ್ಣಗೊಂಡಿದೆ	-	-
53	ಅಂಕೋಲಾ	ತೆಂಗಿನಗುಂಡಿ ಮೀನುಗಾರಿಕೆ ಬಂದರಿನ ಮೀನುಗಾರರ ಸಮುದಾಯ ಭವನದ ಪೂರ್ಣಗೊಂಡ ಕಾಮಗಾರಿ	3.76	3.76	ಪೂರ್ಣಗೊಂಡಿದೆ	-	-

ಕ್ರ. ಸಂ.	ತಾಲ್ಲೂಕು	ಮಂಜೂರಾದ ಕಾಮಗಾರಿಗಳು	ಅಂದಾಜು ಮೊತ್ತ	ಬಿಡುಗಡೆ ಯಾದ ಅನುದಾನ	ಪೂರ್ಣಗೊಂಡ ಕಾಮಗಾರಿಗಳು	ಪ್ರಗತಿಯಲ್ಲಿರುವ ಕಾಮಗಾರಿಗಳು	ಪ್ರಾರಂಭವಾಗದ ಕಾಮಗಾರಿಗಳು
54	ಅಂಕೋಲಾ	ಮಾವಿನಕುರ್ವೆ ಮೀನುಗಾರಿಕೆ ಬಂದರಿನಲ್ಲಿರುª ಹರಾಜು ಪ್ರಾಂಗಂದಲ್ಲಿನ ಒಳಚರಂಡಿಗೆ ಕಬ್ಬಿಣದ ಮುಚ್ಚಳಿಕೆ ಮೇಲ್ಹಾವಣಿ ಮತ್ತು ಗೊಡೆಗಳಿಗೆ ಸುಣ್ಣಬಣ್ಣ ಮಾಡಿಸುವ ಕಾಮಗಾರಿ	0.99	0.99	ಪೂರ್ಣಗೊಂಡಿದೆ	-	-
55	ಅಂಕೋಲಾ	ತೆಂಗಿನಗುಂಡಿ ಮೀನುಗಾರಿಕೆ ಸಮುಧಾಯ ಭವನದ ಬಲಬದಿಯಲ್ಲಿ ತಗಡಿನ ಮಾಡು ನಿರ್ಮಿಸುವ ಕಾಮಗಾರಿ	0.99	0.99	ಪೂರ್ಣಗೊಂಡಿದೆ	-	-
56	ಅಂಕೋಲಾ	ಮಾವಿನಕುರ್ವೆ ಮೀನುಗಾರಿಕೆ ಬಂದರಿನಲ್ಲಿರುª ಹರಾಜು ಪ್ರಾಂಗಂದಲ್ಲಿನ ಅನವಶ್ಯಕ ಬಾಗಿಲುಗಳನ್ನು ಮುಚ್ಚಿ 3 ಕಬ್ಬಿಣದ ಬಾಗಿಲುಗಳನ್ನು ಅಳವಡಿಸುವ ಕಾಮಗಾರಿ	0.99	0.99	ಪೂರ್ಣಗೊಂಡಿದೆ	-	-
57	ಅಂಕೋಲಾ	ತೆಂಗಿನಗುಂಡಿ ಮೀನುಗಾರಿಕೆ ಇಳಿದಾಣ ಕೇಂದ್ರದಲ್ಲಿ ಸಿಸಿ ಕ್ಯಾಮರಾಗಳನ್ನು ಅಳವಡಿಸುವ ಕಾಮಗಾರಿ	0.99	0.99	ಪೂರ್ಣಗೊಂಡಿದೆ	-	-
58	ಅಂಕೋಲಾ	ಅಳ್ವೇಕೋಡಿ ಮೀನುಗಾರಿಕೆ ಇಳಿದಾಣ ಕೇಂದ್ರದಲ್ಲಿ ಸಿಸಿ ಕ್ಯಾಮರಾಗಳನ್ನು ಅಳವಡಿಸುವ ಕಾಮಗಾರಿ	0.99	0.99	ಪೂರ್ಣಗೊಂಡಿದೆ	-	-
59	ಅಂಕೋಲಾ	ತೆಂಗಿನಗುಂಡಿ ಮೀನುಗಾರಿಕೆ ಇಳಿದಾಣA ಕೇಂದ್ರದಲ್ಲಿ ಸಮುದಾಯ ಭವನದ ಅಪೂರ್ಣಗೊಂಡ ಕಾಮಗಾರಿ	0.74	0.74	ಪೂರ್ಣಗೊಂಡಿದೆ	-	-

ಕ್ರ. ಸಂ.	ತಾಲ್ಲೂಕು	ಮಂಜೂರಾದ ಕಾಮಗಾರಿಗಳು	ಅಂದಾಜು ಮೊತ್ತ	ಬಿಡುಗಡೆ ಯಾದ ಅನುದಾನ	ಪೂರ್ಣಗೊಂಡ ಕಾಮಗಾರಿಗಳು	ಪ್ರಗತಿಯಲ್ಲಿರುವ ಕಾಮಗಾರಿಗಳು	ಪ್ರಾರಂಭವಾಗದ ಕಾಮಗಾರಿಗಳು
60	ಅಂಕೋಲಾ	ಮಾವಿನಕುರ್ವೆ ಮೀನುಗಾರಿಕಾ ಬಂದರಿನ ಹರಾಜು ಪ್ರಾಂಗಣದಲ್ಲಿನ ಚರಂಡಿಯ ರಿಪೇರಿ ಕಾಮಗಾರಿ	0.99	0.99	ಪೂರ್ಣಗೊಂಡಿದೆ	-	-
61	ಅಂಕೋಲಾ	ಮಾವಿನಕುರ್ವೆ ಬಂದರಿನ ಪ್ರದೇಶದ ಕುಸಿದಿರುವ ವಾರ್ಫನ ಭಾಗಶ ಕಾಮಗಾರಿ	6.48	6.48	ಪೂರ್ಣಗೊಂಡಿದೆ	-	-
62	ಕುಂದಾಪುರ	ಗಂಗೊಳ್ಳಿ ಮೀನುಗಾರಿಕಾ ಬಂದರಿನಲ್ಲಿ ಮೀನು ಲೋಡಿಂಗ್ ಸ್ಥಳದಲ್ಲಿ ಬೆಳಕಿನ ವ್ಯವಸ್ಥೆ ಮಾಡುವ ಉದ್ದೇಶದಿಂದ ಒಂದು ಹೈಮಾಸ್ಟ ಲೈಟ್ ಅಳವಡಿಸಿದ ಕಾಮಗಾರಿ	4.95	4.95	ಪೂರ್ಣಗೊಂಡಿದೆ	-	-
63	ಕುಂದಾಪುರ	ಗಂಗೊಳ್ಳಿ ಮೀನುಗಾರಿಕೆ ಬಂದರಿನ ಇಲಾಖಾ ಕ್ಯಾಂಟೀನ್ ಕಟ್ಟಡದ ಪಿಟ್‌ನ್ನು ಹೊಸದಾಗಿ ನಿರ್ಮಿಸಿದ ಕಾಮಗಾರಿ	0.765	0.765	ಪೂರ್ಣಗೊಂಡಿದೆ	-	-
64	ಕುಂದಾಪುರ	ಗಂಗೊಳ್ಳಿ ಮೀನುಗಾರಿಕೆ ಬಂದರಿನ ಹರಾಜು ಪ್ರಾಂಗಣ-1ರ ಮೇಲ್ಛಾವಣಿಯ ಹಾರಿಹೋದ ಸಿಮೆಂಟ್ ಶೀಟುಗಳನ್ನು ಹೊಸದಾಗಿ ಅಳವಡಿಸಿದ ಕಾಮಗಾರಿ	0.77	0.77	ಪೂರ್ಣಗೊಂಡಿದೆ	-	-
65	ಕುಂದಾಪುರ	ಗಂಗೊಳ್ಳಿ ಮೀನುಗಾರಿಕೆ ಬಂದರಿನ ಹರಾಜು ಪ್ರಾಂಗಣ-2ರ ಮುಂಭಾಗದಲ್ಲಿ ಕುಸಿದಿರುವ ಕಾಂಕ್ರೀಟ್ ಸ್ಲಾಬ್‌ಗಳ ಸುತ್ತಲೂ ರಕ್ಷಣಾ ಗೋಡೆ ನಿರ್ಮಿಸಿದ ಕಾಮಗಾರಿ	0.26	0.26	ಪೂರ್ಣಗೊಂಡಿದೆ	-	-
66	ಕುಂದಾಪುರ	ಹರಾಜು ಪ್ರಾಂಗಣ-1ರಲ್ಲಿ ಸಂಪೂರ್ಣ ವಯರಿಂಗ್‌ನ್ನು ಮಾಡಿದ ಕಾಮಗಾರಿ	4.95	4.95	ಪೂರ್ಣಗೊಂಡಿದೆ	-	-

ಕ್ರ. ಸಂ.	ತಾಲ್ಲೂಕು	ಮಂಜೂರಾದ ಕಾಮಗಾರಿಗಳು	ಅಂದಾಜು ಮೊತ್ತ	ಬಿಡುಗಡೆ ಯಾದ ಅನುದಾನ	ಪೂರ್ಣಗೊಂಡ ಕಾಮಗಾರಿಗಳು	ಪ್ರಗತಿಯಲ್ಲಿರುವ ಕಾಮಗಾರಿಗಳು	ಪ್ರಾರಂಭವಾಗದ ಕಾಮಗಾರಿಗಳು
67	ಕುಂದಾಪುರ	ಗಂಗೊಳ್ಳಿ ಮೀನುಗಾರಿಕಾ ಬಂದರಿನಲ್ಲಿ ಎರಡನೇ ಹೈಮಾಸ್ಟ್ ಲೈಟ್ ಅಳವಡಿಸಿದ ಕಾಮಗಾರಿ	4.95	4.95	ಪೂರ್ಣಗೊಂಡಿದೆ	-	-
68	ಹೊನ್ನಾವರ	ಹೊನ್ನಾವರ ಮೀನುಗಾರಿಕೆ ಬಂದರಿನ ಅಳಿವೆಯಲ್ಲಿ ಬೋಟುಗಳ ಸುಗಮ ಸಂಚಾರಕ್ಕೆ ಮಾರ್ಗಸೂಚಿಯಾಗಿ ಅಳವಡಿಸಿದ 3 ಬಾಯ್ಸ್‌ಗಳನ್ನು ಮಳೆಗಾಲದ ಪ್ರಾರಂಭದಲ್ಲಿ ಅಳಿವೆಬಾಯಿಂದ ತೆಗೆದು ಸುರಕ್ಷಿತವಾಗಿ ತಂದು ಕೊಟ್ಟ ಕೆಲಸ	0.25	0.25	ಪೂರ್ಣಗೊಂಡಿದೆ	-	-
69	ಹೊನ್ನಾವರ	ಹೊನ್ನಾವರ ಮೀನುಗಾರಿಕೆ ಬಂದರಿನ ಸಂಕೀರ್ಣದಲ್ಲಿ ತಂಪು ಪಾನೀಯ ಹಾಗೂ ಪೌಷ್ಠಿಕ ಆಹಾರ ಪೂರೈಕೆಗೆ 18 ಸೇವಾ ಮಳಿಗೆಗಳನ್ನು ನಿರ್ಮಿಸುವ ಕಾಮಗಾರಿ. (2ನೇ ಮತ್ತು ಭಾಗಶಃ ಬಿಲ್ಲು)	4.81	4.81	ಪೂರ್ಣಗೊಂಡಿದೆ	-	-
70	ಹೊನ್ನಾವರ	ಹೊನ್ನಾವರ ಮೀನುಗಾರಿಕೆ ಬಂದರಿನಲ್ಲಿ 10 ಸಿ.ಸಿ.ಟಿ.ವಿ ಕ್ಯಾಮರಾ ಅಳವಡಿಸಿ ನಿರ್ವಹಿಸುವ ಕಾಮಗಾರಿ.	0.34	0.34	ಪೂರ್ಣಗೊಂಡಿದೆ	-	-
71	ಹೊನ್ನಾವರ	ಹೊನ್ನಾವರ ಮೀನುಗಾರಿಕೆ ಬಂದರಿನ ಸಂಕೀರ್ಣದಲ್ಲಿ ತಂಪು ಪಾನೀಯ ಹಾಗೂ ಪೌಷ್ಠಿಕ ಆಹಾರ ಪೂರೈಕೆಗೆ 18 ಸೇವಾ ಮಳಿಗೆಗಳನ್ನು ನಿರ್ಮಿಸುವ ಕಾಮಗಾರಿ. (3ನೇ ಮತ್ತು ಭಾಗಶಃ ಬಿಲ್ಲು)	0.25	0.25	ಪೂರ್ಣಗೊಂಡಿದೆ	-	-

ಕ್ರ. ಸಂ.	ತಾಲ್ಲೂಕು	ಮಂಜೂರಾದ ಕಾಮಗಾರಿಗಳು	ಅಂದಾಜು ಮೊತ್ತ	ಬಿಡುಗಡೆ ಯಾದ ಅನುದಾನ	ಪೂರ್ಣಗೊಂಡ ಕಾಮಗಾರಿಗಳು	ಪ್ರಗತಿಯಲ್ಲಿರುವ ಕಾಮಗಾರಿಗಳು	ಪ್ರಾರಂಭವಾಗದ ಕಾಮಗಾರಿಗಳು
72	ಹೊನ್ನಾವರ	ಹೊನ್ನಾವರ ಮೀನುಗಾರಿಕೆ ಬಂದರಿನ ಅಳಿವೆಯಲ್ಲಿ ಬೋಟುಗಳ ಸುಗಮ ಸಂಚಾರಕ್ಕೆ ಮಾರ್ಗಸೂಚಿಯಾಗಿ 3 ಸೋಲಾರ್ ದೀಪದ ತೇಲು ಬುರುಡೆ (ಬಾಯ್ಸ್)ಗಳನ್ನು ಅಳವಡಿಸಿ 10 ತಿಂಗಳು ನಿರ್ವಹಿಸುವ ಕೆಲಸ.	0.31	0.31	ಪೂರ್ಣಗೊಂಡಿದೆ	-	-
